# ಜನತಾವಾಣಿ


ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಆಗಸ್ಟ್ 31, 2020

ಸಂಪುಟ : 47 ಸಂಚಿಕೆ : 111 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com







## ವಾಲ್ಮೀಕಿ ಭವನ ಕಾಮಗಾರಿ ಪರಿಶೀಲನೆ



**ಎರಡನೇ ವಾಲ್ಮೀಕಿ ಭವನಕ್ಕೂ ಅನುದಾನ ಶಾಸಕ ಎಸ್.ವಿ. ರಾಮಚಂದ್ರ ಭರವಸೆ**

ದಾವಣಗೆರೆ, ಆ.30- ನಗರದ ಬಿ.ಟಿ. ಲೇಔಟ್‌ನಲ್ಲಿ ನಿರ್ಮಾಣ ಹಂತದಲ್ಲಿರುವ ಮಹರ್ಷಿ ವಾಲ್ಮೀಕಿ ಸಮುದಾಯ ಭವನದ ಕಾಮಗಾರಿಯನ್ನು ಕರ್ನಾಟಕ ರಾಜ್ಯ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ವಿ. ರಾಮಚಂದ್ರ ವೀಕ್ಷಿಸಿದರು.

4.90 ಕೋಟಿ ರೂ. ವೆಚ್ಚದಲ್ಲಿ ಜಿಲ್ಲಾ ಪಂಚಾಯಿತಿಯಿಂದ ನಿರ್ಮಾಣವಾಗುತ್ತಿರುವ ಈ ಭವನದ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಂದ ಮಾಹಿತಿ ಪಡೆದು ಸಲಹೆ-ಸೂಚನೆಗಳನ್ನು ನೀಡಿದರು. ಈ ವೇಳೆ ಮಾತನಾಡಿದ ಅವರು, ನಗರದಲ್ಲಿ ಸುಸಜ್ಜಿತ ವಾದ ಎರಡನೇ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೂ ಸಹ ಸರ್ಕಾರದಿಂದ ಅನುದಾನ ಕೊಡಿಸಲಾಗುವುದು. ಸಮಾಜದ ಮುಖಂಡರು ನಗರದ ಪಿ.ಬಿ. ರಸ್ತೆಯ ಬಳಿ ಜಾಗ ಹುಡುಕಿ ದೂಡಾಗೆ ಮನವಿ (2ನೇ ಪುಟಕ್ಕೆ)

## ಆಟಿಕೆಗಳನ್ನು ತಯಾರಿಸಿ

### 'ಮನ್ ಕಿ ಬಾತ್' ನಲ್ಲಿ ನವೋದ್ಯಮಗಳಿಗೆ ಪ್ರಧಾನಿ ಮೋದಿ ಕರೆ



**ಜಾಗತಿಕವಾಗಿ 7 ಲಕ್ಷ ಕೋಟಿ ರೂ.ಗಳ ಉದ್ಯಮವಾಗಿರುವ ಆಟಿಕೆಗಳಲ್ಲಿ ಭಾರತದ ಪಾಲು ತೀರಾ ಕಡಿಮೆ : ಪ್ರಧಾನಿ**

ನವದೆಹಲಿ, ಆ. 30 – ಜಾಗತಿಕವಾಗಿ 7 ಲಕ್ಷ ಕೋಟಿ ರೂ.ಗಳ ಉದ್ಯಮವಾಗಿರುವ ಆಟಿಕೆಗಳಲ್ಲಿ ಭಾರತದ ಪಾಲು ತೀರಾ ಕಡಿಮೆ ಇದೆ ಎಂದು ಹೇಳಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ನವೋದ್ಯಮಗಳು ಹಾಗೂ ಉದ್ಯಮಿಗಳು ಆಟಿಕೆಗಳನ್ನು ರೂಪಿಸುವತ್ತ ಗಮನ ಹರಿಸಬೇಕೆಂದು ಕರೆ ನೀಡಿದ್ದಾರೆ.


ಮಾಸಿಕ 'ಮನ್ ಕಿ ಬಾತ್' ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡಿರುವ ಪ್ರಧಾನಿ, ನವೋದ್ಯಮಗಳು ಆಟಿಕೆಗಳನ್ನು ದೇಶೀಯವಾಗಿ ಉತ್ಪಾದಿಸುವ ಕಾಲ ಬಂದಿದೆ. ದೇಶವನ್ನು ಆಟಿಕೆಗಳ ಉತ್ಪಾದನಾ ತಾಣವಾಗಿ ಮಾಡಲುವ ಪ್ರತಿಭೆ ಹಾಗೂ ಸಾಮರ್ಥ್ಯದ ಕೊರತೆ ಇಲ್ಲ ಎಂದಿದ್ದಾರೆ.

ಭಾರತದಲ್ಲಿ ಹಾಗೂ ಭಾರತವನ್ನು ಆಧರಿಸಿದ ಕಂಪ್ಯೂಟರ್ ಗೇಮ್‌ಗಳನ್ನು ರೂಪಿಸುವಂತೆ ಕರೆ ನೀಡಿರುವ ಮೋದಿ, ಆಟಿಕೆ ಹಾಗೂ ಗೇಮಿಂಗ್ ವಲಯದಲ್ಲಿ ಅನ್ವೇಷಣೆಗೆ ಅಗತ್ಯವಾದ ಸಮೃದ್ಧ ಪರಂಪರೆ ಹಾಗೂ ಸಂಪ್ರದಾಯ ಇಲ್ಲಿದೆ ಎಂದಿದ್ದಾರೆ. ನಮ್ಮ ದೇಶದಲ್ಲಿ ಸಾಕಷ್ಟು ವಿಚಾರಗಳು ಹಾಗೂ ಪರಿಕಲ್ಪನೆಗಳು ಇವೆ. ದೇಶದ ಇತಿಹಾಸ ಸಮೃದ್ಧವಾಗಿದೆ. ಅದರ ಆಧಾರದ ಮೇಲೆ ನಾವು ಗೇಮ್‌ಗಳನ್ನು ರೂಪಿಸ ಬಹುದೇ? ದೇಶದ ಯುವ ಪ್ರತಿಭೆಗಳು ಈ ಬಗ್ಗೆ ಗಮನ ಹರಿಸಬೇಕಿದೆ. ಆಟ ಆರಂಭಿಸ ಬೇಕಿದೆ ಎಂದು ಪ್ರಧಾನಿ ತಿಳಿಸಿದ್ದಾರೆ.

ಜಾಗತಿಕವಾಗಿ ಆಟಿಕೆ ಉತ್ಪಾದನೆ ಹಾಗೂ ರಫ್ತು ಮಾಡುವಲ್ಲಿ ಚೀನಾ ಮುಂಚೂಣಿಯಲ್ಲಿದೆ. ಆಟಿಕೆಗಳಲ್ಲಿ (3ನೇ ಪುಟಕ್ಕೆ)

### ಮುಧೋಳ್‌ಗೆ ಪ್ರಶಂಸೆ

**ದೇಶೀಯ ಶ್ವಾನ ತಳಿ ಉತ್ತೇಜನಕ್ಕೆ ಕರೆ**



ನವದೆಹಲಿ, ಆ. 30 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮಾಸಿಕ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಮುಧೋಳ್ ಶ್ವಾನ ತಳಿಯನ್ನು ಪ್ರಸ್ತಾಪಿಸಿದ್ದು, ದೇಶೀಯ ತಳಿಗಳಿಗೆ ಉತ್ತೇಜನ ನೀಡುವಂತೆ ಕರೆ ನೀಡಿದ್ದಾರೆ.

ಮುಧೋಳ್ ಹಾಗೂ ಹಿಮಾಚಲಿ ಶ್ವಾನ ತಳಿಗಳು ಸೇರಿದಂತೆ ಹಲವಾರು ಭಾರತೀಯ ತಳಿಗಳು ಅತ್ಯುತ್ತಮವಾಗಿವೆ ಎಂದು ಪ್ರಧಾನಿ ತಿಳಿಸಿದ್ದಾರೆ. ರಾಜಪಾಳ್ಯಂ, ಕನ್ನಿ, ಚಿಪ್ಪಿಪರಾಯಿ ಹಾಗೂ ಕೊಂಬೈ ಶ್ವಾನ ತಳಿಗಳೂ ಸಹ ಅತ್ಯುತ್ತಮವಾಗಿವೆ. ಇವುಗಳನ್ನು ಬೆಳೆಸುವ ವೆಚ್ಚವೂ ಕಡಿಮೆ ಹಾಗೂ ಭಾರತದ ಪರಿಸರಕ್ಕೂ ಚೆನ್ನಾಗಿ ಹೊಂದಿಕೊಳ್ಳುತ್ತವೆ ಎಂದು ಪ್ರಧಾನಿ ತಿಳಿಸಿದ್ದಾರೆ. ಈಗ ನಮ್ಮ ರಕ್ಷಣಾ ಸಂಸ್ಥೆಗಳೂ ಸಹ ಭಾರತೀಯ ತಳಿಗಳನ್ನು ರಕ್ಷಣಾ (2ನೇ ಪುಟಕ್ಕೆ)

## ಕೊಪ್ಪಳದಲ್ಲಿ ದೇಶದ ಮೊದಲ ಆಟಿಕೆ ಕ್ಲಸ್ಟರ್: ಬಿಎಸ್‌ವೈ

**ಐದು ವರ್ಷಗಳಲ್ಲಿ 5 ಸಾವಿರ ಕೋಟಿ ರೂ. ಹೂಡಿಕೆ ನಿರೀಕ್ಷೆ**

ಬೆಂಗಳೂರು, ಆ. 30 – ಭಾರತದ ಮೊದಲ ಆಟಿಕೆ ಉತ್ಪಾದಕ ಕ್ಲಸ್ಟರ್ ಕೊಪ್ಪಳದಲ್ಲಿ ಸ್ಥಾಪನೆಯಾಗಲಿದ್ದು, ಈ ಮೂಲಕ ಐದು ವರ್ಷಗಳಲ್ಲಿ 40 ಸಾವಿರ ಜನರಿಗೆ ಉದ್ಯೋಗ ಸಿಗಲಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ 'ವೋಕಲ್ ಫಾರ್ ಲೋಕಲ್' ಕರೆಯ ಮೇರೆಗೆ ಕೊಪ್ಪಳದಲ್ಲಿ ದೇಶದ (2ನೇ ಪುಟಕ್ಕೆ)

## ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಗೆ ಕೊರೊನಾ



ಬೆಂಗಳೂರು, ಆ. 30 – ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಕೊರೊನಾ ಸೋಂಕಿಗೆ ಗುರಿಯಾಗಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ಕೊರೊನಾ ವರದಿಯಲ್ಲಿ ಪಾಸಿಟಿವ್ ಬಂದಿದೆ. ರೋಗ ಲಕ್ಷಣಗಳಿ ಲ್ಲದಿದ್ದರೂ ವೈದ್ಯರ ಸಲಹೆ ಮೇರೆಗೆ ಆಸ್ಪತ್ರೆಗೆ ದಾಖಲಾಗಿದ್ದೇನೆ ಎಂದು (2ನೇ ಪುಟಕ್ಕೆ)

## ಜನಗಣತಿ ಮುಂದಿನ ವರ್ಷಕ್ಕೆ

ನವದೆಹಲಿ, ಆ. 30 – ಕೊರೊನಾ ಹಿನ್ನೆಲೆಯಲ್ಲಿ ಜನಗಣತಿಯ ಮೊದಲ ಹಂತ ಹಾಗೂ ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್ (ಎನ್.ಪಿ.ಆರ್.) ಮಾಹಿತಿ ಸಂಗ್ರಹಣೆಯನ್ನು ಮುಂದೂಡಲಾಗಿದೆ. ಕೊರೊನಾ ಕಡಿಮೆಯಾಗುವ ಯಾವುದೇ ಸೂಚನೆಗಳು ಕಂಡು ಬರದ ಕಾರಣ, ಈ ಪ್ರಕ್ರಿಯೆಗಳು ಒಂದು ವರ್ಷ ವಿಳಂಬವಾಗುವ ಸಾಧ್ಯತೆ ಇದೆ.

ವಿಶ್ವದಲ್ಲೇ ಅತಿ ದೊಡ್ಡ ಆಡಳಿತಾತ್ಮಕ ಹಾಗೂ ಅಂಕಿ-ಅಂಶಗಳ ಪ್ರಕ್ರಿಯೆಯಾಗಿ ರುವ ಜನಗಣತಿಯಲ್ಲಿ 30 ಲಕ್ಷಕ್ಕೂ ಹೆಚ್ಚು ಅಧಿಕಾರಿಗಳು (2ನೇ ಪುಟಕ್ಕೆ)

## ತುರ್ತು ಚಿಕಿತ್ಸೆ ಆಸ್ಪತ್ರೆಗಳ ಕರ್ತವ್ಯ

ನವದೆಹಲಿ, ಆ. 30 – ಚಿಕಿತ್ಸಾ ಶುಲ್ಕ ಪಾವತಿಸಬೇಕೆಂದು ಒತ್ತಾಯಿಸಲು ಆಸ್ಪತ್ರೆಗೆ ಎಲ್ಲಾ ಹಕ್ಕಿದೆ. ಆದರೆ, ಅದಕ್ಕೂ ಮೀರಿ ರೋಗಿಗೆ ತುರ್ತು ಚಿಕಿತ್ಸೆ ನೀಡುವುದು ಆಸ್ಪತ್ರೆಯ ಪ್ರಾಥಮಿಕ ಕರ್ತವ್ಯ ಎಂದು ಹೇಳಿರುವ ರಾಷ್ಟ್ರೀಯ ಗ್ರಾಹಕ ವಿವಾದಗಳ ಇತ್ಯರ್ಥ ಆಯೋಗ (ಎನ್.ಸಿ.ಡಿ.ಆರ್.ಸಿ.), ಚಿಕಿತ್ಸೆ ನೀಡಲು ನಿರ್ಲಕ್ಷ್ಯ ತೋರಿ ಸಾವಿಗೆ ಕಾರಣವಾದ ಆರೋಪದ ಮೇಲೆ ವೆಲ್ಲೂರಿನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜಿ(ಸಿ.ಎಂ.ಸಿ.)ಗೆ 25 ಲಕ್ಷ ರೂ.ಗಳ ಪರಿಹಾರ ನೀಡಬೇಕೆಂದು ತಿಳಿಸಿದೆ. ತನ್ನ ಪತಿಗೆ ತುರ್ತಾಗಿ ಸಿ.ಟಿ. (3ನೇ ಪುಟಕ್ಕೆ)


### ಹಳೇಕುಂದುವಾಡ ದ್ರಾಕ್ಷಾಯಣಮ್ಮ ನಿಧನ



ದಾವಣಗೆರೆ ಸಿಟಿ ಹಳೇಕುಂದುವಾಡದ ವಾಸಿ **ಪಾಟೀಲ ಸಿದ್ದನಗೌಡ್ರು** ಇವರ ಎರಡನೇ ಧರ್ಮಪತ್ನಿ **ಶ್ರೀಮತಿ ದ್ರಾಕ್ಷಾಯಣಮ್ಮ** ಅವರು ದಿನಾಂಕ 29.8.2020ನೇ ಶನಿವಾರ ಸಂಜೆ 6 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 69 ವರ್ಷ ವಯಸ್ಸಾಗಿತ್ತು. ಪತಿ, ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 30.8.2020ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆಯ ವೈಕುಂಠಧಾಮದಲ್ಲಿ ನೆರವೇರಿಸಲಾಯಿತು.

– ದುಃಖತಪ್ತ ಕುಟುಂಬ ವರ್ಗ
ಹಾಗೂ ಪಾಟೀಲ್ ವಂಶಸ್ಥರು, ಹಳೇಕುಂದುವಾಡ
ಮೊ. 96115 80395, 99009 50948, 99866-47024

## ಜಿಲ್ಲೆಯಲ್ಲಿ 374 ದೃಢ, 4 ಸಾವು



ದಾವಣಗೆರೆ, ಆ. 30- ಜಿಲ್ಲೆಯಲ್ಲಿ ಭಾನುವಾರ 374 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟ ವರದಿಯಾಗಿದೆ. ನಾಲ್ವರು ಸಾವನ್ನಪ್ಪಿದ್ದು, 168 ಜನರು ಬಿಡುಗಡೆಯಾಗಿದ್ದಾರೆ.

ಇಲ್ಲಿಯವರೆಗೆ ಜಿಲ್ಲೆಯಲ್ಲಿ 9231 ಜನರಲ್ಲಿ ಸೋಂಕು ಕಾಣಿಸಿಕೊಂಡಿದ್ದು, 6632 ಜನರು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. 2414 ಸಕ್ರಿಯ ಪ್ರಕರಣಗಳಿವೆ.

ದಾವಣಗೆರೆ ತಾಲ್ಲೂಕಿನಲ್ಲಿ 163, ಹರಿಹರ 40, ಜಗಳೂರು 33, ಚನ್ನಗಿರಿ 84, ಹೊನ್ನಾಳಿ 44 ಹಾಗೂ ಹೊರ ಜಿಲ್ಲೆಯ 10 ಜನರಲ್ಲಿ ಸೋಂಕು ದೃಢಪಟ್ಟಿದೆ.

ದಾವಣಗೆರೆ ನಗರ ಸೇರಿದಂತೆ ಕುರ್ಕಿ , ಆವರಗೆರೆ, ಬಿಸಲೇರಿ ಕ್ಯಾಂಪ್, ಹೊನ್ನೂರು ಗೊಲ್ಲರಹಟ್ಟಿ, ಐಗೂರು, ಹೊಸ ಬೆಳವನೂರು, ಕುಕ್ಕುವಾಡ, ಬಸಾಪುರ, ಕೊಡಗನೂರು, ಹಾಲವರ್ತಿ ಗ್ರಾಮಗಳಲ್ಲಿ ಸೋಂಕು ಕಾಣಿಸಿಕೊಂಡಿದೆ. (3ನೇ ಪುಟಕ್ಕೆ)

### ಶಾಸಕ ರವೀಂದ್ರನಾಥ್‌ಗೆ ಪಾಸಿಟಿವ್ - ನೆಗೆಟಿವ್



**ದಾವಣಗೆರೆ, ಆ. 30 – ಶಾಸಕ ಎಸ್.ಎ. ರವೀಂದ್ರನಾಥ್ ಅವರಿಗೆ ಕೊರೊನಾ ಪಾಸಿಟಿವ್ ಬಂದಿದೆ ಎಂದು ಜಿಲ್ಲಾಡಳಿತದ ಭಾನುವಾರದ ವರದಿಯಲ್ಲಿ ತಿಳಿಸಲಾಗಿದೆ. ಮತ್ತೊಂದೆಡೆ, ಶಾಸಕರು ಆರ್.ಟಿ. - ಪಿ.ಸಿ. ಆರ್. ಪರೀಕ್ಷೆ ನಡೆಸಿದಾಗ ನೆಗೆಟಿವ್ ಬಂದಿದೆ. ಶಿರಮಗೊಂಡನಹಳ್ಳಿ ಶಾಸಕರಿಗೆ ಕೊರೊನಾ ಪಾಸಿಟಿವ್ ಬಂದಿದೆ. ಇವರ ಜಿಲ್ಲಾ ಸಂಖ್ಯೆ ಡಿವಿಜಿ - 9035 ಎಂದು ಜಿಲ್ಲಾಡಳಿತದ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಆದರೆ, ಜೆಜೆಎಂಸಿ ಆಸ್ಪತ್ರೆಯಲ್ಲಿ ಆಗಸ್ಟ್ 29ರ ಶನಿವಾರದಂದು ನಡೆಸಲಾದ ಆರ್.ಟಿ. - ಪಿ.ಸಿ. ಆರ್. ಪರೀಕ್ಷೆಯಲ್ಲಿ ಶಾಸಕರಿಗೆ ನೆಗೆಟಿವ್ ಬಂದಿದೆ. ರ್ಯಾಪಿಡ್ ಟೆಸ್ಟ್ ಮಾಡಿಸಿದ ಸಂದರ್ಭದಲ್ಲಿ ಶಾಸಕರಿಗೆ ಪಾಸಿಟಿವ್ ಬಂದಿದೆ. ಮರು ದಿನವೇ ನಡೆಸಲಾದ ಆರ್.ಟಿ.-ಪಿಸಿಆರ್ ಪರೀಕ್ಷೆಯಲ್ಲಿ ನೆಗೆಟಿವ್ ಬಂದಿದೆ. ಒಂದು ದಿನದಲ್ಲೇ ಶಾಸಕರ ಕೊರೊನಾ ಫಲಿತಾಂಶದಲ್ಲಿ ಬದಲಾವಣೆಯಾಗಿದೆ ಎಂದು ಹೇಳಲಾಗುತ್ತಿದೆ.**

### ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ

॥ ಶ್ರೀ ಕಾರಡಗಿ ವೀರಭದ್ರೇಶ್ವರ ಪ್ರಸನ್ನ ॥ ॥ ಶ್ರೀ ರೇಣುಕಾಚಾರ್ಯ ಪ್ರಸೀದಂತು ॥

ದಾವಣಗೆರೆ ಸಿಟಿ ಕೆ.ಟಿ.ಜೆ. ನಗರ 2ನೇ ಮೇನ್, 2ನೇ ಕ್ರಾಸ್ ವಾಸಿಗಳಾದ
**ಶ್ರೀಮತಿ ಬಸಮ್ಮ ಮತ್ತು ಶ್ರೀ ಬಿ. ಎನ್. ರುದ್ರೇಶಪ್ಪ**
ಇವರುಗಳು ಮಾಡುವ ವಿಜ್ಞಾಪನೆಗಳು.
ದಿನಾಂಕ 24.08.2020ನೇ ಸೋಮವಾರ ಬೆಳಗಿನ ಜಾವ 4 ಗಂಟೆಗೆ ನನ್ನ ಪೂಜ್ಯ ತಾಯಿಯವರಾದ



**ಶ್ರೀಮತಿ ಬ್ಯಾಡಗಿ ಪಾರ್ವತಮ್ಮ (ಭದ್ರಮ್ಮ)**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಸಮಾರಾಧನೆ'ಯನ್ನು**
**ದಿನಾಂಕ 01.09.2020 ನೇ ಮಂಗಳವಾರ ಬೆಳಿಗ್ಗೆ 10.30 ಕ್ಕೆ**
**ಕೆ.ಟಿ.ಜೆ. ನಗರ 2ನೇ ಮೇನ್, 2ನೇ ಕ್ರಾಸ್‌ನಲ್ಲಿರುವ**
**ಶ್ರೀ ಗುರು ರೇವಣಸಿದ್ದೇಶ್ವರ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ**
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಬಸಮ್ಮ ಶ್ರೀ ಬಿ.ಎನ್.ರುದ್ರೇಶಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು
ಬ್ಯಾಡಗಿ ವಂಶಸ್ಥರು ಹಾಗೂ ಬಂಧು - ಮಿತ್ರರು. ಮೊ: 99804 08111

### ಅಲ್‌ಹಾಜ್ ಟಿ.ಎಸ್. ಮಹಮದ್ ಖಾಸಿಂ ಸಾಬ್ ನಿಧನ



ದಾವಣಗೆರೆ ಇಮಾಂನಗರ ನೂರಾನಿ ಮಸೀದಿ ಹಿಂಭಾಗದ ವಾಸಿ
ಮೋಹದಿಸೆ ಎ ಅಝುಮ್ ಮಿಷನ್ ಅಧ್ಯಕ್ಷರೂ,
ಟಿಮ್ಕೋ ಮೆಟಲ್ ಸೆಕ್ಷನ್, ಟೋಮ್ಯಾಕ್ ಇಂಡಸ್ಟ್ರೀಸ್ ಮಾಲೀಕರೂ ಆದ
**ಅಲ್‌ಹಾಜ್ ಟಿ.ಎಸ್. ಮಹಮದ್ ಖಾಸಿಂ ಸಾಬ್**
ಅವರು ದಿನಾಂಕ 30.08.2020ರ ಭಾನುವಾರ ಸಂಜೆ 6.30ಕ್ಕೆ
ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 65 ವರ್ಷ ವಯಸ್ಸಾಗಿತ್ತು. ಪತ್ನಿ, ನಾಲ್ವರು ಪುತ್ರರು ಹಾಗೂ
ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು
ದಿನಾಂಕ 31.08.2020ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ನಗರದ
ಪಿ.ಬಿ. ರಸ್ತೆಯಲ್ಲಿರುವ ಹಳೇ ಖಬರಸ್ತಾನದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಮೊ. : 98444 80715, 94483 38002

### "ಕೈಲಾಸ ಶಿವಗಣಾರಾಧನೆ"



॥ ಶ್ರೀ ಗುರು ಲೆಕ್ಕದೇಶ್ವರ ಪ್ರಸನ್ನ ॥
**ಶ್ರೀ ರಾಜೀವ ರಾಜಶೇಖರಪ್ಪ ಜಂಬಿಗಿ**
ಸಾ. ರಾಣೇಬೆನ್ನೂರು, ಜಿ. ಹಾವೇರಿ ಇವರು ಮಾಡುವ ವಿಜ್ಞಾಪನೆಗಳು.
ನಮ್ಮ ಮಾತೋಶ್ರೀಯವರಾದ
**ಶ್ರೀಮತಿ ಪ್ರಮೀಳಾ ರಾಜಶೇಖರಪ್ಪ ಜಂಬಿಗಿ (RLJ)**
ಇವರು ದಿನಾಂಕ 27.08.2020 ಗುರುವಾರ ಬೆಳಿಗ್ಗೆ 9.15 ಕ್ಕೆ
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**"ಕೈಲಾಸ ಶಿವಗಣಾರಾಧನೆ"ಯನ್ನು**
**ದಿನಾಂಕ 31.08.2020 ರ ಸೋಮವಾರ ಮಧ್ಯಾಹ್ನ 12.30 ಕ್ಕೆ "ಮೃತರ ಸ್ವಗೃಹ"ದಲ್ಲಿ**
**ಮಾನ್ವಿ ಕಂಪನಿ ಹತ್ತಿರ, ಅಶೋಕ ಸರ್ಕಲ್, ರಾಣೇಬೆನ್ನೂರಿನಲ್ಲಿ** ನೆರವೇರಿಸಲಾಗುವುದು.
ಕಾರಣ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
**ಜಂಬಿಗಿ ಕುಟುಂಬ ವರ್ಗ ಹಾಗೂ ಅಪಾರ ಬಂಧು-ಬಳಗ**

# 24 ತಾಸು ಆಮ್ಲಜನಕ ಸಿಲಿಂಡರ್‌ಗಳ ಉಚಿತ ಸೇವೆಗೆ ಜಮಾಯಿತ್ ಈ ಉಲ್ಮಾ ಸಿದ್ಧ

ದಾವಣಗೆರೆ, ಆ.30- ಜಮಾಯಿತ್ ಈ ಉಲ್ಮಾ ವತಿಯಿಂದ ಸುಮಾರು 30 ಆಮ್ಲಜನಕ ಸಿಲಿಂಡರ್‌ಗಳನ್ನು ಉಚಿತವಾಗಿ ಅಗತ್ಯವಿರುವ ಕೋವಿಡ್ ರೋಗಿಗಳ ಸೇವೆಗೆ ವೈದ್ಯರ ಮೇಲ್ವಿಚಾರಣೆಯಲ್ಲಿ 24 ತಾಸು ಲಭ್ಯವಿರಲಿವೆ ಎಂದು ಸಂಸ್ಥೆಯ ಜಿಲ್ಲಾಧ್ಯಕ್ಷ ಮೌಲಾನ ಸಮೀವುಲ್ಲಾ, ಕಾರ್ಯದರ್ಶಿ ಅಬ್ದುಲ್ ರಜಾಕ್ ತಿಳಿಸಿದ್ದಾರೆ.

ಸಾರ್ವಜನಿಕ ಸೇವೆಗಾಗಿ ನೀಡಲಾಗುವ ಆಮ್ಲಜನಕ ಸಿಲಿಂಡರ್ ದುರ್ಬಳಕೆ ತಪ್ಪಿಸುವ ಸಲುವಾಗಿ ಮುಂಗಡವಾಗಿ 5 ಸಾವಿರ ಕಟ್ಟಿಸಿಕೊಂಡು ಸಿಲಿಂಡರ್ ನೀಡಲಿದ್ದು, ಅದನ್ನು ಉಪಯೋಗಿಸಿ ವಾಪಸ್ ನೀಡಿದ ಮೇಲೆ ಪುನಃ ಕಟ್ಟಿದ ಮುಂಗಡ ಹಣ ವಾಪಸ್ ಪಡೆಯಬಹುದಾಗಿದೆ ಎಂದಿದ್ದಾರೆ.

ಸಿಲಿಂಡರ್ ಗಳ ಅವಶ್ಯಕತೆ ಉಸಿರಾಟದ ತೊಂದರೆಯುಳ್ಳ ಕೊರೊನಾ ರೋಗಿಗಳಿಗೆ ಇದ್ದು, ವೈದ್ಯರ ಸಲಹೆ-ಮಾರ್ಗದರ್ಶನದಡಿ ಇದರ ಬಳಕೆಗೆ ನೀಡಲು ಲಭ್ಯವಿವೆ. ಈಗಾಗಲೇ ಸುಮಾರು 7 ಸಿಲಿಂಡರ್ ಗಳು ಸದ್ವಿನಿಯೋಗವಾಗಿದ್ದು, ಇನ್ನುಳಿದ ಸಿಲಿಂಡರ್ ಗಳ ಸದ್ಬಳಕೆಯನ್ನು ಕೋವಿಡ್ ಆಸ್ಪತ್ರೆಯ ರೋಗಿಗಳಿಗೆ ಹಾಗೂ ನಗರ, ಗ್ರಾಮೀಣ ಭಾಗದ ಜನರು ಸೇರಿದಂತೆ ನಮ್ಮ ಜಿಲ್ಲೆಯ ಜನರು ಅಷ್ಟೇ ಅಲ್ಲದೇ ಅವಶ್ಯವುಳ್ಳ ಇತರೆ ಜಿಲ್ಲೆಯವರು ಸಹ ಮಾಡಿಕೊಳ್ಳಬಹುದಾಗಿದೆ. ಜಮಾಯಿತ್ ಈ ಉಲ್ಮಾ ವತಿಯಿಂದ ಆಮ್ಲಜನಕ ಸಿಲಿಂಡರ್‌ಗಳ ಸೇವೆ ನೀಡಲು ಸಿದ್ದವಿದ್ದು, 9731009003, 9036693513, 9448045708, 9964239688, 9739192005, 91642 81272 ಈ ಸಂಖ್ಯೆ ಸಂಪರ್ಕಿಸಬಹುದು ಎಂದು ಜಿಲ್ಲಾ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸೈಯದ್ ಸೈಫುಲ್ಲಾ ಮನವಿ ಮಾಡಿದ್ದಾರೆ.

## ನ್ಯಾಮತಿ ಉಪವಿಭಾಗದಲ್ಲಿ ಇಂದಿನಿಂದ ವಿದ್ಯುತ್ ವ್ಯತ್ಯಯ

ಬೆಸ್ಕಾಂ ನ್ಯಾಮತಿ ಉಪವಿಭಾಗದ ವ್ಯಾಪ್ತಿಗೆ ಬರುವ 66/11 ಕೆವಿ ನ್ಯಾಮತಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಎಲ್ಲಾ ಫೀಡರ್‌ಗಳ ದೋಷಪೂರಿತ ಬಸ್ ಬಾರ್‌ಗಳನ್ನು ಬದಲಾವಣೆ ಮಾಡುವ ಕೆಲಸವನ್ನು ಹಮ್ಮಿಕೊಂಡಿದ್ದು, ಸದರಿ ವಿವಿ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಫೀಡರ್‌ಗಳ ಸಂಪರ್ಕವನ್ನು ತಾತ್ಕಾಲಿಕವಾಗಿ ಸಮೀಪದ ಬೇರೆ ವಿವಿ ಕೇಂದ್ರಗಳಲ್ಲಿ ವಿದ್ಯುತ್ ಸರಬರಾಜು ಆಗುವ ಫೀಡರ್‌ಗಳಿಗೆ ಸಂಪರ್ಕ ನೀಡಲಾಗುವುದು.

ಇಂದಿನಿಂದ ಬರುವ ಸೆಪ್ಟೆಂಬರ್ 12 ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಾಸವಾಗಬಹುದು ಎಂದು ಉಪವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಬಿ.ಕೆ. ಶ್ರೀನಿವಾಸ್ ತಿಳಿಸಿದ್ದಾರೆ.

# ಸೊಳ್ಳೆಗಳ ನಿಯಂತ್ರಣಕ್ಕೆ, ಸ್ವಚ್ಛತೆಗೆ ಆದ್ಯತೆ ನೀಡಿ

### ಆರ್.ಸಿ.ಹೆಚ್ ಅಧಿಕಾರಿ ಡಾ.ಮೀನಾಕ್ಷಿ



ದಾವಣಗೆರೆ, ಆ.30- ಸೊಳ್ಳೆ ನಿಯಂತ್ರಣಕ್ಕೆ ಸಾರ್ವಜನಿಕರು ತಮ್ಮ ಮನೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಮೀನಾಕ್ಷಿ ಹೇಳಿದರು.

ರೊನಾಲ್ಡ್ ರಾಸ್ ಅವರ ಸವಿನೆನಪಿಗಾಗಿ ಆಚರಿಸುವ ವಿಶ್ವ ಸೊಳ್ಳೆ ದಿನಾಚರಣೆಯನ್ನು ಇತ್ತೀಚೆಗೆ ನಗರದ ಭಾರತ್ ಕಾಲೋನಿಯಲ್ಲಿನ ಆರೋಗ್ಯ ಕೇಂದ್ರದಲ್ಲಿ ಜನಜಾಗೃತಿ ಜಾಥಾ ಮೂಲಕ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಮ್ಮ ಮನೆಯ ಸುತ್ತಲಿನ ಪರಿಸರದಲ್ಲಿರುವ ಘನತ್ಯಾಜ್ಯ ವಸ್ತುಗಳಲ್ಲಿ ನೀರು ಶೇಖರಣೆ ಆಗದಂತೆ ಜಾಗ್ರತೆ ವಹಿಸುವಂತೆ ತಿಳಿಸಿದರು.

ಈಗಾಗಲೇ ಅತೀ ಹೆಚ್ಚಾಗಿ ಮಳೆಗಾಲ ಪ್ರಾರಂಭವಾಗಿದ್ದು, ಡೆಂಗ್ಯೂ ಜ್ವರ, ಚಿಕನ್‌ಗುನ್ಯಾ ರೋಗಗಳನ್ನು ಹರಡುವ ಸೊಳ್ಳೆಗಳು ಹೆಚ್ಚಾಗಿ ನೀರಿನಲ್ಲಿ ಹುಟ್ಟುವುದರಿಂದ ಸಾರ್ವಜನಿಕರು ಸ್ವಚ್ಛತೆಗೆ ಆದ್ಯತೆ ನೀಡಿ, ತಮ್ಮ ಮನೆಯ ನೀರಿನ ಎಲ್ಲಾ ಪರಿಕರಗಳನ್ನು ಕನಿಷ್ಠ ವಾರಕ್ಕೊಮ್ಮೆ ಚೆನ್ನಾಗಿ ತೊಳೆದು ನೀರು ತುಂಬಿ ಭದ್ರವಾಗಿ ಮುಚ್ಚಿಡಬೇಕು ಎಂದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಎಲ್. ಡಿ.ವೆಂಕಟೇಶ್ ಮಾತನಾಡಿ, ವಿಶ್ವ ಸೊಳ್ಳೆ ದಿನಾಚರಣೆಯನ್ನು ಪ್ರತಿ ವರ್ಷವೂ ಆಚರಿಸಲಾಗುತ್ತಿದ್ದು, ವಿವಿಧ ಜಾತಿಯ ಸೊಳ್ಳೆಗಳ ಬಗ್ಗೆ ಹಾಗೂ ಅವುಗಳ ಉತ್ಪತ್ತಿ ತಾಣಗಳ ಬಗ್ಗೆ, ನಿಯಂತ್ರಣದ ಬಗ್ಗೆ ಜನರಿಗೆ ಜಾಗೃತಿ ಮೂಡಿಸುವ ಮುಖ್ಯ ಉದ್ದೇಶ ಇದಾಗಿರುತ್ತದೆ ಎಂದು ತಿಳಿಸಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಎಚ್. ಉಮಾಪತಿ ಮಾತನಾಡಿ, ಸೊಳ್ಳೆಗಳ ನಿಯಂತ್ರಣದ ಜೊತೆಗೆ ಈ ವರ್ಷ ಹರಡಿರುವಂತಹ ಕೊರೊನಾ ರೋಗದ ಬಗ್ಗೆಯು ಸಾರ್ವಜನಿಕರು ಎಚ್ಚರಿಕೆ ವಹಿಸಬೇಕೆಂದ ಅವರು, ಮಾಸ್ಕ್ ಧರಿಸುವುದು, ಸ್ಯಾನಿಟೈಜರ್ ಬಳಸುವುದು, ಜನಸಂದಣಿ ಪ್ರದೇಶಗಳಲ್ಲಿ ಅಂತರ ಕಾಪಾಡಿಕೊಳ್ಳುವುದು ಸೇರಿದಂತೆ ಅಗಿಂದಾಗ್ಗೆ ಕೈಗಳನ್ನು ತೊಳೆಯಬೇಕು. ಆ ಮೂಲಕ ಎಲ್ಲಾ ಮುಂಜಾಗ್ರತೆ ಕ್ರಮಗಳನ್ನು ವಹಿಸುವುದರಿಂದ ಕೊರೊನಾ ಹೋಗಲಾಡಿಸಬಹುದು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಡೆಂಗ್ಯೂ, ಚಿಕನ್‌ಗುನ್ಯಾ, ಮಲೇರಿಯಾ ಕಾಯಿಲೆಗಳು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದ್ದು, ಸೊಳ್ಳೆಗಳ ನಿಯಂತ್ರಣಕ್ಕೆ ಸಾರ್ವಜನಿಕರು ಇನ್ನಷ್ಟು ಜಾಗೃತಿ ವಹಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಡಾ.ಸುನೀತಾ ಕೋಬಾಡೆ ದಗಡು, ತಾಲ್ಲೂಕು ಹಿರಿಯ ಪುರುಷ ಆರೋಗ್ಯ ಸಹಾಯಕ ವೆಂಕಟಾಚಲ ಕುಮಾರ, ಕಿರಿಯ ಪುರುಷ ಆರೋಗ್ಯ ಸಹಾಯಕ ಪ್ರಕಾಶ್ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ಕಿರಿಯ ಮಹಿಳಾ ಆರೋಗ್ಯ ಸಹಾಯಕರು, ಆಶಾ ಕಾರ್ಯಕರ್ತೆಯರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು ಎಂದು ತಾಲ್ಲೂಕು ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ.

## ಆಟಿಕೆಗಳನ್ನು ತಯಾರಿಸಿ

(1ನೇ ಪುಟದಿಂದ) ಭಾರತದ ಪಾಲು ಹೆಚ್ಚಿ ಸುವ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಇತ್ತೀಚೆಗೆ ಸಭೆಯೊಂದನ್ನು ನಡೆಸಿದ್ದರು.

ದೇಶ ಪ್ರತಿಯೊಂದು ವಲಯದಲ್ಲಿ ಆತ್ಮ ನಿರ್ಭರ್ ಆಗಬೇಕಿದೆ. ಇದರಲ್ಲಿ ಆಟಿಕೆ ಹಾಗೂ ಗೇಮಿಂಗ್ ವಲಯ ಸಹ ಸೇರಿದೆ ಎಂದವರು ಹೇಳಿದ್ದಾರೆ. ಜಾಗತಿಕವಾಗಿ ಆಟಿಕೆಯ ಉದ್ಯಮ 7 ಲಕ್ಷ ಕೋಟಿ ರೂ.ಗಳಿಗೂ ಬೃಹತ್ತಾಗಿದೆ. ಇಷ್ಟು ದೊಡ್ಡ ಉದ್ಯಮದಲ್ಲಿ ಭಾರತದ ಪಾಲು ತೀರಾ ಕಡಿಮೆ ಇದೆ. ದೇಶ ಈ ಬಗ್ಗೆ ಯೋಚಿಸಬೇಕಿದೆ. ಭಾರತದಲ್ಲಿ ಸಾಕಷ್ಟು ಸಂಪ್ರದಾಯ, ಪರಂಪರೆ, ವೈವಿಧ್ಯತೆ, ಯುವ ಪೀಳಿಗೆ ಇದೆ. ಹೀಗಿರುವಾಗ ಆಟಿಕೆಗಳಲ್ಲಿ ಭಾರತದ ಪಾಲು ಇಷ್ಟು ಕಡಿಮೆ ಇರುವುದು ಒಳ್ಳೆಯದೆನಿ ಸುತ್ತದೆಯೇ? ಎಂದು ಪ್ರಧಾನಿ ಪ್ರಶ್ನಿಸಿದ್ದಾರೆ.

ಸ್ಥಳೀಯ ಆಟಿಕೆಗಳ ಸಮೃದ್ಧ ಪರಂಪರೆ ಯನ್ನೇ ಭಾರತ ಹೊಂದಿದೆ. ಇಲ್ಲಿ ಪ್ರತಿಭಾವಂತ ಹಾಗೂ ಕುಶಲ ಕಲಾವಿದರಿದ್ದಾರೆ. ದೇಶದ ಕೆಲ ಭಾಗಗಳನ್ನು ಆಟಿಕೆಗಳ ಕ್ಲಸ್ಟರ್ ಆಗಿ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದು ಮೋದಿ ಹೇಳಿದ್ದಾರೆ. ನಾವು ಆಟಿಕೆಗಳ ಮೂಲಕ ಭವ್ಯ ಇತಿಹಾಸವನ್ನು ವಾಪಸ್ ತರಬಹುದಾಗಿದೆ ಹಾಗೂ ಸ್ವರ್ಣಮಯ ಭವಿಷ್ಯಕ್ಕೆ ಉತ್ತೇಜನ ನೀಡಬಹುದಾಗಿದೆ. ನವೋದ್ಯಮಿ ಸ್ನೇಹಿತರು ಆಟಿಕೆಗಳಿಗಾಗಿ ತಂಡಗಳನ್ನು ಕಟ್ಟಿಕೊಳ್ಳ ಬೇಕಿದೆ ಎಂದವರು ಕರೆ ನೀಡಿದ್ದಾರೆ.

## 374 ದೃಢ, 4 ಸಾವು

(1ನೇ ಪುಟದಿಂದ) ಜೆಜೆಎಂಎಂ ಕಾಲೇಜಿನ ನಿವಾಸಿ ವೈದ್ಯ, ಚರ್ಮರೋಗ ವಿಭಾಗದ ಪಿ.ಜೆ. ವಿದ್ಯಾರ್ಥಿ, ಕಾಲೇಜಿನ ಸಿಬ್ಬಂದಿ, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಇಬ್ಬರು, ಸಿ.ಜೆ. ಆಸ್ಪತ್ರೆಯ ನಿವಾಸಿ ವೈದ್ಯರು, ಸಿಬ್ಬಂದಿಗಳು, ಕೆನರಾ ಬ್ಯಾಂಕ್‌ನ ಪ್ರಾದೇಶಿಕ ಅಧಿಕಾರಿ, ಎಸ್.ಎಸ್.ಐ.ಎಂ.ಎಸ್. ರಿಸರ್ಚ್ ಸೆಂಟರ್‌ನ ಸಿಬ್ಬಂದಿಗಳು, ಮಹಿಳಾ ಪೊಲೀಸ್ ಠಾಣೆಯ ಸಿಬ್ಬಂದಿ ಸೇರಿದಂತೆ ಕೆಲ ಕೊರೊನಾ ವಾರಿಯರ್ಸ್‌ಗಳೂ ಸಹ ಸೋಂಕಿಗೆ ತುತ್ತಾಗಿದ್ದಾರೆ.

## ನಗರಕ್ಕೆ ಇಂದು ಕಾಂಗ್ರೆಸ್ ಸೇವಾದಳ ಅಧ್ಯಕ್ಷರ ಆಗಮನ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸೇವಾದಳ ಸದಸ್ಯತ್ವ ಅಭಿಯಾನ ಕಾರ್ಯಕ್ರಮ ಇಂದು ಬೆಳಿಗ್ಗೆ 11:30 ಕ್ಕೆ ಜಿಲ್ಲಾ ಕಾಂಗ್ರೆಸ್ ಕಚೇರಿಯ ಎಸ್.ಎಸ್.ಭವನದಲ್ಲಿ ನಡೆಯಲಿದೆ. ಕಾರ್ಯಕ್ರಮಕ್ಕೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸೇವಾದಳ ರಾಜ್ಯಾಧ್ಯಕ್ಷರು ಹಾಗೂ ಎಐಸಿಸಿ ಸದಸ್ಯರಾದ ಕುಮಾರಿ ಎಸ್. ಪ್ಯಾರಿಜಾನ್ ಆಗಮಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್. ಬಿ. ಮಂಜಪ್ಪ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಭಾಗವಹಿಸುವರು ಎಂದು ಜಿಲ್ಲಾ ಕಾಂಗ್ರೆಸ್ ಸೇವಾದಳದ ಅಧ್ಯಕ್ಷ ಡೋಲಿ ಚಂದ್ರು ತಿಳಿಸಿದ್ದಾರೆ.

## ಹರಿಹರ ತಾಲ್ಲೂಕಿನಲ್ಲಿ ಇಂದು ಸಂಸದರ ಪ್ರವಾಸ

ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಇಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಹರಿಹರ ವಿಧಾನಸಭಾ ಕ್ಷೇತ್ರದ ಬೆಳ್ಳೂಡಿ, ಕೊಕ್ಕನೂರು ಕ್ಯಾಂಪ್, ತಿಮ್ಮಾಪುರ ಗಡಿಭಾಗ, ಕೊಮಾರನಹಳ್ಳಿ ಗ್ರಾಮಗಳಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ (ಪಿಎಂಜಿಎಸ್‌ವೈ) ರಸ್ತೆ ಕಾಮಗಾರಿಗಳ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

## ಪೋತಲಕಟ್ಟೆ ಗ್ರಾ.ಪಂ. ಮಾಡಲು ಒತ್ತಾಯ

ಹರಪನಹಳ್ಳಿ, ಆ. 30- ಪೋತಲಕಟ್ಟೆ ಗ್ರಾಮವನ್ನು ಗ್ರಾಮ ಪಂಚಾಯ್ತಿ ಮಾಡುವಂತೆ ಸ್ಥಳೀಯ ಹಾಗೂ ಸುತ್ತ ಮುತ್ತಲಿನ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಪೋತಲಕಟ್ಟೆ ಗ್ರಾಮಕ್ಕೆ ಈಗಾಗಲೇ ಪ್ರತ್ಯೇಕ ಬೂತ್ ಇದೆ. ಈ ಗ್ರಾಮಕ್ಕೆ ಉಮ್ಲಾನಾಯ್ಕನ ತಾಂಡಾ, ಸಣ್ಣ ತಾಂಡಾ, ಬೇವಿನಹಳ್ಳಿ ದೊಡ್ಡತಾಂಡಾ, ಗೌಳೇರಹಟ್ಟಿ ತಾಂಡಾ ಗ್ರಾಮಗಳೂ ಸೇರುತ್ತವೆ.

ಈ ಎಲ್ಲಾ ಹಳ್ಳಿಗಳು ಹಾಲಿ ಇರುವ ಗ್ರಾ.ಪಂ.ಗೆ 6 ರಿಂದ 7 ಕಿ.ಮೀ. ದೂರವಾಗುತ್ತಿದ್ದು, ಮುಂದಿನ ಗ್ರಾ. ಪಂ. ಚುನಾವಣೆಯೊಳಗೆ ಪೋತಲಕಟ್ಟೆ ಗ್ರಾಮವನ್ನು ಗ್ರಾಮ ಪಂಚಾಯ್ತಿ ಮಾಡುವಂತೆ ಪೋತಲಕಟ್ಟೆ ಗ್ರಾಮದ ದುರ್ಗದ ಶಿವಪ್ಪ ಮನವಿ ಮಾಡಿದ್ದಾರೆ.

ಈ ಬಗ್ಗೆ ಹರಪನಹಳ್ಳಿ ತಾಲ್ಲೂಕು ಚುನಾವಣಾಧಿಕಾರಿಗಳಿಗೆ, ತಹಶೀಲ್ದಾರರಿಗೆ ಹಾಗೂ ಬಳ್ಳಾರಿ ಜಿಲ್ಲಾಧಿಕಾರಿಗಳಿಗೆ ಗ್ರಾಮಸ್ಥರು ಮನವಿ ಸಲ್ಲಿಸಿದ್ದು, ಹರಪನಹಳ್ಳಿ ಉಪ ವಿಭಾಗಾಧಿಕಾರಿಗಳು ಅಗತ್ಯ ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ತಹಶೀಲ್ದಾರ್ ಅವರಿಗೆ ಪತ್ರ ಬರೆದಿದ್ದಾರೆ.

## ತುರ್ತು ಚಿಕಿತ್ಸೆ ಆಸ್ಪತ್ರೆಗಳ ಕರ್ತವ್ಯ

(1ನೇ ಪುಟದಿಂದ) ಸ್ಕ್ಯಾನ್ ಪರೀಕ್ಷೆ ನಡೆಸಬೇಕಿತ್ತು. ಆದರೆ, 1,850 ರೂ.ಗಳನ್ನು ಪಾವತಿಸಿದ ರಸೀದಿ ಬೇಕೆಂದು ಪರೀಕ್ಷೆಯನ್ನು ಮೂರು ಗಂಟೆ ಕಾಲ ವಿಳಂಬ ಮಾಡಿದ್ದೇ ಸಾವಿಗೆ ಕಾರಣವಾಗಿದೆ ಎಂದು ಯಶೋಮತಿ ದೇವಿ ಎಂಬುವವರು ಆಯೋಗಕ್ಕೆ ದೂರು ನೀಡಿದ್ದರು.

1.50 ಲಕ್ಷ ರೂ.ಗಳನ್ನು ಮುಂಗಡವಾಗಿ ಪಾವತಿಸಲಾಗಿತ್ತು. ಇಷ್ಟಾದರೂ, 1,850 ರೂ.ಗಳ ರಸೀದಿಗಾಗಿ ಕಾಯಿಸಿ ಸಾವಿಗೆ ಕಾರಣವಾಗಲಾಗಿದೆ ಎಂದು ದೂರಿದ ಅರ್ಜಿಯ ವಿಚಾರಣೆ ನಡೆಸಿದ ಎಸ್.ಎಂ. ಕಾಂತಿಕರ್ ಹಾಗೂ ದಿನೇಶ್ ಸಿಂಗ್ ಅವರನ್ನು ಒಳಗೊಂಡ ಪೀಠ, ಆಸ್ಪತ್ರೆಯು 25 ಲಕ್ಷ ರೂ.ಗಳ ಪರಿಹಾರವನ್ನು ಶೇ.8ರ ವಾರ್ಷಿಕ ಬಡ್ಡಿಯೊಂದಿಗೆ ನೀಡಬೇಕು ಎಂದು ತಿಳಿಸಿದೆ.

58 ವರ್ಷದ ವ್ಯಕ್ತಿಯನ್ನು 2009ರಲ್ಲಿ ಎಡತೋಳಿನ ನೋವಿನ ಕಾರಣದಿಂದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಪರೀಕ್ಷೆ ನಡೆಸಿದಾಗ ಕೊರೊನರಿ ಆರ್ಟರಿ ಡಿಸೀಸ್ ಇರುವುದು ಕಂಡು ಬಂದಿತ್ತು.

ಸರಿಯಾದ ಪರೀಕ್ಷೆ ನಡೆಸಿದೇ ಹೆಪರಿನ್ ಔಷಧಿ ನೀಡಲಾಗಿತ್ತು. ಇದು ರೋಗಿಯ ಸ್ಥಿತಿ ಮತ್ತಷ್ಟು ಬಿಗಡಾಯಿಸಲು ಕಾರಣವಾಗಿತ್ತು. ನಂತರ ಅವರಿಗೆ ಪಾರ್ಶ್ವವಾಯು ಬಡಿದಿತ್ತು. ತಕ್ಷಣವೇ ಸಿ.ಟಿ. ಸ್ಕ್ಯಾನ್ ಅಗತ್ಯವಾಗಿತ್ತು. ಆದರೆ, ಹಣ ನೀಡಿಲ್ಲ ಎಂಬ ಕಾರಣಕ್ಕಾಗಿ ಸಿ.ಟಿ. ಸ್ಕ್ಯಾನ್ ವಿಳಂಬ ಮಾಡಲಾಗಿತ್ತು ಎಂದು ದೂರಿನಲ್ಲಿ ತಿಳಿಸಲಾಗಿತ್ತು.

ಬೆಳಿಗ್ಗೆ 8.30ರ ವೇಳೆ ಪಾರ್ಶ್ವವಾಯು ಆಗಿತ್ತು. ಆದರೆ, ಸಿ.ಎಂ.ಸಿ. ಆಸ್ಪತ್ರೆಯ ವೈದ್ಯರು ರಾತ್ರಿ 10.30ರವರೆಗೂ ಯಾವುದೇ ಚಿಕಿತ್ಸೆ ನೀಡಿರಲಿಲ್ಲ. ಇದರಿಂದಾಗಿ ಸಾವು ಸಂಭವಿಸಿದೆ ಎಂದು ದೂರಿನಲ್ಲಿ ಹೇಳಲಾಗಿತ್ತು.

ಇದಕ್ಕೆ ಆಕ್ಷೇಪಿಸಿದ್ದ ಆಸ್ಪತ್ರೆ, ವಾಸ್ತವಾಂಶ ಮುಚ್ಚಿಟ್ಟು ಸುಳ್ಳು ದೂರು ನೀಡಲಾಗಿದೆ. ಆಸ್ಪತ್ರೆಗೆ ದಾಖಲಾಗುವ ಮೊದಲೇ ನೀಡಲಾಗಿದ್ದ ಔಷಧದಿಂದಾಗಿ ಆಂತರಿಕ ರಕ್ತ ಸೋರಿಕೆ ಉಂಟಾಗಿತ್ತು ಎಂದು ತಿಳಿಸಿತ್ತು.

ನಂತರ ಮೃತ ರೋಗಿಯ ಪತ್ನಿ ಹಾಗೂ ಮಗ ಸಿ.ಎಂ.ಸಿ. ವಿರುದ್ಧ ದೂರು ದಾಖಲಿಸಿ 2.01 ಕೋಟಿ ರೂ.ಗಳ ಪರಿಹಾರ ಕೇಳಿದ್ದರು.

## ಹರಿಹರ ತಾ.ನಲ್ಲಿ ಇಂದು ವಿವಿಧ ರಸ್ತೆ ಕಾಮಗಾರಿಗಳಿಗೆ ಭೂಮಿ ಪೂಜೆ

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಹರಿಹರ ತಾಲ್ಲೂಕಿನಲ್ಲಿ ವಿವಿಧ ರಸ್ತೆ ಕಾಮಗಾರಿಗಳಿಗೆ ಸಂಸದ ಜಿ.ಎಂ ಸಿದ್ದೇಶ್ವರ, ಶಾಸಕ ಎಸ್.ರಾಮಪ್ಪ ಅವರು ಇಂದು ಭೂಮಿ ಪೂಜೆ ನೆರವೇರಿಸಲಿದ್ದಾರೆ. ಬೆಳಿಗ್ಗೆ 11.30ಕ್ಕೆ ಬೆಳ್ಳೂಡಿಯಲ್ಲಿ, ಮಧ್ಯಾಹ್ನ 1 ಗಂಟೆಗೆ ಕೊಕ್ಕನೂರು ಮಟ್ಟಿ ಕ್ಯಾಂಪ್, 1.30 ಕ್ಕೆ ತಿಮ್ಲಾಪುರ ಗಡಿಭಾಗದಲ್ಲಿ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ಮಾಡಿ, ಮಧ್ಯಾಹ್ನ 1.45 ಗಂಟೆಗೆ ಕೊಮಾರನಹಳ್ಳಿಯ ಶ್ರೀ ರಂಗನಾಥ ಸ್ವಾಮಿ ದೇವಸ್ಥಾನದ ಸಮುದಾಯ ಭವನದಲ್ಲಿ ಹಮ್ಮಿಕೊಂಡಿರುವ ಸಭಾ ಕಾರ್ಯಕ್ರಮ ದಲ್ಲಿ ಭಾಗವಹಿಸಲಿದ್ದಾರೆ. ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿ.ಪಂ ಸದಸ್ಯರಾದ ಬಿ.ಎಂ. ವಾಗೀಶ್‌ಸ್ವಾಮಿ, ಶ್ರೀಮತಿ ನಿರ್ಮಲ, ಟಿ. ಮುಕುಂದ, ಶ್ರೀಮತಿ ಹೇಮಾವತಿ ಭೀಮಪ್ಪ, ತಾ.ಪಂ. ಅಧ್ಯಕ್ಷರಾದ ಶ್ರೀಮತಿ ಶ್ರೀದೇವಿ ಮಂಜಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

## ಮೂಲಭೂತ ಕರ್ತವ್ಯಗಳ ಕುರಿತು ನಗರದಲ್ಲಿ ಇಂದು ಜಾಗೃತಿ ಅಭಿಯಾನ

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ದಾವಣಗೆರೆ, ಸ್ಲಂ ಜನಾಂದೋಲನ ಕರ್ನಾಟಕ ಜಿಲ್ಲಾ ಸಮಿತಿ ದಾವಣಗೆರೆ ಇವರುಗಳ ಸಂಯುಕ್ತಾಶ್ರಯದಲ್ಲಿ ಸಂವಿಧಾನ ದಿನಾಚರಣೆ ಅಂಗವಾಗಿ ಮೂಲಭೂತ ಕರ್ತವ್ಯಗಳ ಕುರಿತು ಜಾಗೃತಿ ಅಭಿಯಾನ ಕಾರ್ಯಕ್ರಮವನ್ನು ಇಂದು ಮಧ್ಯಾಹ್ನ 12 ಗಂಟೆಗೆ ನಗರದ ಹಳೇ ಕೋರ್ಟ್ ಆವರಣದ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಲ್ಲಿ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಾಬಪ್ಪ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸುವರು. ಸ್ಲಂ ಜನಾಂದೋಲನ ಕರ್ನಾ ಟಕದ ಜಿಲ್ಲಾ ಸಂಚಾಲಕರಾದ ರೇಣುಕಾ ಯಲ್ಲಮ್ಮ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಎಲ್.ಹೆಚ್. ಅರುಣ್ ಕುಮಾರ್, ಸ್ಲಂ ಜನಾಂದೋಲನ ಕರ್ನಾಟಕದ ಜಿಲ್ಲಾಧ್ಯಕ್ಷ ಶಬ್ಬೀರ್ ಸಾಬ್, ಸ್ಲಂ ಜನಾಂದೋಲನ ಸಹ ಕಾರ್ಯದರ್ಶಿ ಹೆಚ್.ಬಸವರಾಜ್ ಪಾಲ್ಗೊಳ್ಳುವರು.

## ಕಾನೂನು ಪದವೀಧರರಿಗೆ ತರಬೇತಿಗಾಗಿ ಅರ್ಜಿ

ದಾವಣಗೆರೆ, ಆ.30- ಅಲ್ಪಸಂಖ್ಯಾತರ ಜನಾಂಗಕ್ಕೆ ಸೇರಿದ ಜಿಲ್ಲೆಯ 5 ನಿರುದ್ಯೋಗಿ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ ನೀಡಲು ಅರ್ಹ ಅಭ್ಯರ್ಥಿಗಳಿಂದ ತರಬೇತಿ/ಶಿಷ್ಯವೇತನ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಠಡಿ ಸಂಖ್ಯೆ 44 ಎರಡನೇ ಮಹಡಿ, ಜಿಲ್ಲಾಡಳಿತ ಭವನ, ಕರೂರು ರಸ್ತೆ, ದಾವಣಗೆರೆ, ಇಲ್ಲಿ ಅರ್ಜಿಗಳನ್ನು ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಅವಶ್ಯಕ ದಾಖಲೆಗಳೊಂದಿಗೆ ನಾಳೆ ದಿನಾಂಕ 31 ರೊಳಗೆ ಸಲ್ಲಿಸುವುದು.

## ದಾವಣಗೆರೆ ಹಾಕಿ ಲೆಜೆಂಡ್ ಮೇಜರ್ ಧ್ಯಾನ್‌ಸಿಂಗ್ ಜನ್ಮದಿನಾಚರಣೆ



ದಾವಣಗೆರೆ,ಆ.30- ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಮತ್ತು ಹಾಕಿ ಲೆಜೆಂಡ್ ಮೇಜರ್ ಧ್ಯಾನ್‌ಸಿಂಗ್ ಜನ್ಮ ದಿನಾಚರಣೆ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಕುಲಸಚಿವ ಪ್ರೊ. ಬಸವರಾಜ್ ಬಣಕಾರ, ಪರೀಕ್ಷಾಂಗ ಕುಲಸಚಿವೆ ಪ್ರೊ. ಅನಿತಾ ಹೆಚ್.ಎಸ್, ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ರಾಜ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಖೇಲೋ ಇಂಡಿಯಾ ಕೇಂದ್ರವಾಗಿ ಗುರ್ತಿಸಲು ಅರ್ಜಿ ಆಹ್ವಾನ

ದಾವಣಗೆರೆ, ಆ.30- ಭಾರತ ಸರ್ಕಾರವು, ಖೇಲೋ ಇಂಡಿಯಾ ಯೋಜನೆಯಡಿ ತಳಮಟ್ಟದಲ್ಲಿ ಪರಿಣಾಮಕಾರಿಯಾದ ಕ್ರೀಡಾ ತರಬೇತಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಆರ್ಚರಿ, ಅಥ್ಲೆಟಿಕ್ಸ್, ಬಾಕ್ಸಿಂಗ್, ಬ್ಯಾಡ್ಮಿಂಟನ್, ಸೈಕ್ಲಿಂಗ್, ಫೆನ್ಸಿಂಗ್, ಹಾಕಿ, ಜೂಡೊ, ರೋವಿಂಗ್, ಶೂಟಿಂಗ್, ಸ್ವಿಮ್ಮಿಂಗ್, ಟೇಬಲ್ ಟೆನ್ನಿಸ್, ವೇಟ್‌ಲಿಫ್ಟಿಂಗ್, ಕುಸ್ತಿ ಈ ಎಲ್ಲಾ ಕ್ರೀಡೆಗಳನ್ನು ಗುರ್ತಿಸಲಾಗಿದೆ.

ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಪದಕ ವಿಜೇತ ಕ್ರೀಡಾಪಟು ಹಾಗೂ ಸಂಸ್ಥೆಗಲು ತರಬೇತಿ ನೀಡುತ್ತಿದ್ದಲ್ಲಿ, ಅಂತಹ ಕೇಂದ್ರಗಳನ್ನು ಖೇಲೋ ಇಂಡಿಯಾ ಕೇಂದ್ರವಾಗಿ ಗುರ್ತಿಸಲಾಗುವುದು. ಆಯ್ಕೆಯಾದಂತಹ ಕೇಂದ್ರಗಳಿಗೆ ಕೇಂದ್ರ ಸರ್ಕಾರದಿಂದ ತರಬೇತುದಾರರ ಗೌರವಧನ, ಸಹಾಯಕ ಸಿಬ್ಬಂದಿ, ಕ್ರೀಡಾ ಉಪಕರಣಗಳು, ಕ್ರೀಡಾ ಕಿಟ್, ಕ್ರೀಡಾಕೂಟಗಳಲ್ಲಿ ಭಾಗವಹಿಸುವಿಕೆಗೆ ತಗಲುವ ವೆಚ್ಚವನ್ನು ಗರಿಷ್ಟ ವಾರ್ಷಿಕ 5 ಲಕ್ಷ ರೂಪಾಯಿಗಳನ್ನು ನೀಡಲಾಗುವುದು.

ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ವಿವರಗಳಿಗಾಗಿ ಕಚೇರಿ ವೇಳೆಯಲ್ಲಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ದಾವಣಗೆರೆ ಇವರನ್ನು ಸಂಪರ್ಕಿಸಬೇಕೆಂದು ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಪ್ರಾದೇಶಿಕ-ಮಾತೃ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ; ಸ್ವಾಗತಾರ್ಹ



ದಾವಣಗೆರೆ, ಆ.30- ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ ಪ್ರಾದೇಶಿಕ-ಮಾತೃ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ನೀಡುವ ಕೇಂದ್ರದ ನಿಲುವನ್ನು ಕಸಾಪ ತಾಲ್ಲೂಕು ಅಧ್ಯಕ್ಷ ಬಿ. ವಾಮದೇವಪ್ಪ ಸ್ವಾಗತಿಸಿದ್ದಾರೆ.

ಡಯಟ್ ಸಭಾಂಗಣದಲ್ಲಿ ಏರ್ಪಡಿಸಿದ್ದ ಮಾತೃ ಭಾಷೆಯಲ್ಲೇ ಪ್ರಾಥಮಿಕ ಶಿಕ್ಷಣ ನೀಡಬೇಕು ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಕೌಶಲ್ಯಾಭಿವೃದ್ಧಿಗೆ ಹೆಚ್ಚು ಮಹತ್ವ ನೀಡಿರುವ ಕೇಂದ್ರ ಸರ್ಕಾರ೦ ಕಾರ್ಯ ಶ್ಲಾಘನೀಯ ಎಂದರು.

ನೂತನ ಶಿಕ್ಷಣ ನೀತಿಯಲ್ಲಿ ಸ್ವಾವಲಂಬನೆಯ ಜೀವನಕ್ಕೆ ಒತ್ತು ನೀಡಿರುವುದು ಅಭಿನಂದನೀಯ ಎಂದು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಡಯಟ್ ಪ್ರಾಚಾರ್ಯ ಹೆಚ್.ಕೆ. ಲಿಂಗರಾಜ್, ಜಿ.ಪಂ. ಸದಸ್ಯೆ ಶೈಲಜಾ ಬಸವರಾಜ್, ನಿವೃತ್ತ ಪ್ರಾಂಶುಪಾಲ ಪ್ರೊ. ಎಸ್. ಬಿ. ರಂಗನಾಥ್, ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಶಿಕ್ಷಣ ತಜ್ಞ ಡಾ. ಹೆಚ್.ವಿ. ವಾಮದೇವಪ್ಪ, ಪ್ರೊ. ಸಿ.ಹೆಚ್. ಮುರಿಗೇಂದ್ರಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಹರಿಹರ : ಹೊಸಭರಂಪುರದ ಗ್ರಾಮದೇವತೆಗೆ ವಿಶೇಷ ಪೂಜೆ

ಹರಿಹರ, ಆ.30- ನಗರದ ಹೊಸಭರಂಪುರ ಬಡಾವಣೆಯಲ್ಲಿ ಶ್ರೀ ಗ್ರಾಮದೇವತೆ ದೇವರ ಎರಡನೇ ವರ್ಷದ ಪ್ರಾಣ ಪ್ರತಿಷ್ಠಾಪನೆ ನಿಮಿತ್ತವಾಗಿ ದೇವಿಗೆ ವಿಶೇಷ ಪೂಜೆ ಮಹಾ ಮಂಗಳಾರತಿ ಹಾಗೂ ಸಂಜೆ ಶ್ರೀ ಗಣೇಶೋತ್ಸವ ವಿಸರ್ಜನೆ ವೇಳೆ ನಗರಸಭೆ ಪೌರ ಕಾರ್ಮಿಕ ಕರಿಯಪ್ಪ ಮೂವತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವುದಕ್ಕೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿ ಪೂಜಾರ್ ಈರಣ್ಣ, ಸುರೇಶ್ ಚಂದಪೂರ್, ಹಾವನೂರು ಈರಣ್ಣ, ಮಜ್ಜಿಗೆ ಚಂದ್ರಪ್ಪ, ಕಂಚಿಕೇರಿ ಚಿದಾನಂದ, ಬೆಣ್ಣೆ ಸಿದ್ದೇಶ್, ರಾಘು ಚೌಗಲೆ, ಮಲ್ಲಪ್ಪ ಗುಡ್ಡದ್ದ, ರವಿಕುಮಾರ ಮಡಿವಾಳ, ದಾವಣಗೆರೆ ರುದ್ರಪ್ಪ ಅರ್ಚಕ ನಾಗರಾಜ್, ನಂಜುಂಡಚಾರ್, ಹಣಿಗಿ ನಾಗರಾಜ್, ಹಾಲೇಶ್, ವೇದಮೂರ್ತಿ, ರಾಘವೇಂದ್ರ, ಗಿರೀಶ್, ಕಂಚಿಕೇರಿ ಕರಿಬಸಪ್ಪ, ನವೀನ, ನರೇಂದ್ರ, ಕೆ.ಬಿ. ಚಂದ್ರಪ್ಪ, ನೀಲಗುಂದ ಗಿರೀಶ್, ಬಸವರಾಜ್, ಅಜಯ್ ಬಾಸಿಂಗದರ್, ಶಂಭು ಹಾವನೂರು, ಹನುಮಂತಪ್ಪ ಬೆಣ್ಣೆ, ತಿಪ್ಪೇಶಿ ಹಣಗಿ, ಪ್ರಕಾಶ್ ಕಂಚಿಕೇರಿ, ಸಂಜು ಪೂಜಾರ್, ಅರ್ಜುನ್, ರಾಘು, ಈರೇಶ್, ದಾವಣಗೆರೆ ಈರಣ್ಣ, ಪ್ರದೀಪ್, ವಿಜಯಕುಮಾರ್, ನಾಗೇನಹಳ್ಳಿ ಹಾಲೇಶ್ ಮತ್ತು ಇತರರು ಉಪಸ್ಥಿತರಿದ್ದರು.

## ಶಿರಮಗೊಂಡನಹಳ್ಳಿ ಕೃಷಿ ಪತ್ತಿನ ಸಂಘದ ಅಧ್ಯಕ್ಷರಾಗಿ ಶಂಭುಲಿಂಗಪ್ಪ



ದಾವಣಗೆರೆ,ಆ.30- ಶಿರಮಗೊಂಡನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಆರ್.ಸಿ. ಶಂಭುಲಿಂಗಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಹರಿಹರ ಆರೋಗ್ಯ ಮಾತೆ ಚರ್ಚ್‌ನಲ್ಲಿ ಮೇರಿ ಮಾತೆ ಜಾತ್ರೆಗೆ ಚಾಲನೆ



ಹರಿಹರ, ಆ.30- ಪಟ್ಟಣದ ಆರೋಗ್ಯ ಮಾತೆ ಚರ್ಚ್‌ನಲ್ಲಿ ಮೇರಿ ಮಾತೆ ಜಾತ್ರಾ ಕಾರ್ಯಕ್ರಮವನ್ನು ಧ್ವಜಾರೋಹಣ ಮಾಡುವ ಮೂಲಕ ಸಂಸದ ಜಿ.ಎಂ. ಸಿದ್ದೇಶ್ವರ ಉದ್ಘಾಟಿಸಿದರು. ಕಳೆದ ವರ್ಷ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಉಪಸ್ಥಿತಿಯಲ್ಲಿ ವಿಜೃಂಭಣೆಯಿಂದ ಜಾತ್ರೆಯನ್ನು ಆಚರಿಸಲಾಗಿತ್ತು. ಈ ವರ್ಷ ದೇಶದಲ್ಲಿ ಮಹಾಮಾರಿ ಕೊರೊನಾ ಇರುವುದರಿಂದ ನಾವೆಲ್ಲರೂ ಸರಳವಾಗಿ ಮನೆಯಲ್ಲೇ ಆಚರಿಸೋಣ ಎಂದರು.

ಈ ಸಂದರ್ಭದಲ್ಲಿ ಬೆಸಿಲಿಕಾ ಚರ್ಚ್ ಮುಖ್ಯಸ್ಥರು, ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಮಾಜಿ ಜಿಲ್ಲಾಧ್ಯಕ್ಷ ಯಶವಂತ ರಾವ್ ಜಾಧವ್ ಹಾಗೂ ಇತರರು ಉಪಸ್ಥಿತರಿದ್ದರು.

# ದೇಶಭಕ್ತಿಯೇ ದೊಡ್ಡ ಶಕ್ತಿ : ನಾಗರಾಜು ಲೋಕಿಕೆರೆ



ದಾವಣಗೆರೆ, ಆ.30- ಈ ಮಣ್ಣಿನಲ್ಲಿ ಹುಟ್ಟಿದ ಮೇಲೆ ನಾವೆಲ್ಲಾ ಭಾರತೀಯರು. ದೇಶಕ್ಕಾಗಿ ನಾವು ಭಕ್ತಿ ಮೂಲಕ ದೇಶಪ್ರೇಮಿಗಳಾದರೆ ಸಾಕು ಎಂದು ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ನಾಗರಾಜ್ ಲೋಕಿಕೆರೆ ಹೇಳಿದರು.

ವಿದ್ಯಾನಗರದ ಗಾಂಧಿ ಪುತ್ಥಳಿ ಬಳಿಯ ವೃತ್ತದಲ್ಲಿ ನಾಗರಾಜ್ ಲೋಕಿಕೆರೆ ಅಭಿಮಾನಿ ಬಳಗದಿಂದ ನಡೆದ 74 ನೇ ಸ್ವಾತಂತ್ರ್ಯೋತ್ಸವ ದಿನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟದ ಮೂಲಕ ಹಲವರು ತಮ್ಮ ಪ್ರಾಣ ತ್ಯಾಗ ಮಾಡಿದ್ದಾರೆ. ಮಹಾತ್ಮ ಗಾಂಧೀಜಿಯವರು ಶಾಂತಿ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವ ಮೂಲಕ ವಿಶ್ವಕ್ಕೆ ಶಾಂತಿ ಪ್ರಿಯರಾಗಿದ್ದಾರೆ. ಇಂತಹ ಮಹಾನ್ ವ್ಯಕ್ತಿಗಳನ್ನು ನಾವು ಸ್ಮರಿಸುವ ಜೊತೆಗೆ ಅವರ ಆದರ್ಶ ಮತ್ತು ದೇಶಪ್ರೇಮವನ್ನು ಮೈಗೂಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಹಿಂದೂ, ಮುಸ್ಲಿಂ, ಕ್ರೈಸ್ತ ಸೇರಿದಂತೆ ಎಲ್ಲಾ ಸಮುಯದಾಯಗಳು ದೇಶದಲ್ಲಿ ಪ್ರೀತಿ, ವಿಶ್ವಾಸ, ಸಹೋದರತೆಯಿಂದ ಬದುಕುತ್ತಿದ್ದೇವೆ, ಇದೇ ನಮ್ಮ ಸೌಭಾಗ್ಯ. ವಿವಿಧತೆಯಲ್ಲಿ ಏಕತೆ ಭಾರತದ ಸಂಸ್ಕೃತಿ ಎಂಬಂತೆ ನಮ್ಮ ದೇಶ ವೈವಿಧ್ಯತೆಯ ನಾಡು ಎಂದು ನಾಗರಾಜ್ ಅವರು ಹೇಳಿದರು.

ಇದೇ ವೇಳೆ ಮಾತನಾಡಿದ ಶೋಷಿತ ವರ್ಗಗಳ ಮುಖಂಡ ಬಾಡಾದ ಆನಂದರಾಜು, ಸ್ವಾತಂತ್ರ್ಯೋತ್ಸವ ದಿನ ಆಚರಣೆ ಕೇವಲ ಕಾರ್ಯಕ್ರಮ ಆಗಬಾರದು, ದೇಶ ಪ್ರೇಮದ ಸಂಕೇತವಾಗಬೇಕು ಎಂದರು. ನಾವೆಲ್ಲರೂ ಭಾರತೀಯರು ಒಂದೇ ಎಂಬ ಭಾವನೆಯಿಂದ ಬದುಕಲು ಸ್ವಾತಂತ್ರ್ಯ ದಿನಾಚರಣೆ ಮಾಡಿ ದೇಶ ಪ್ರೇಮ ಮೆರೆಯುತ್ತಿರುವುದೇ ಸಾಕ್ಷಿ ಎಂದು ಬಾಡಾದ ಆನಂದರಾಜು ತಿಳಿಸಿದರು.

ಆಟೋ ಚಾಲಕರ ಸಂಘದ ಅಧ್ಯಕ್ಷ ನಾಗರಾಜ್, ಅಣ್ಣಪ್ಪ, ಸ್ವಾಮಿ, ಅಂಗವಿಕಲರ ಸಂಘದ ಅಧ್ಯಕ್ಷ ಧನುಂಜಯ್, ಮಹದೇವಮ್ಮ ಸುನೀತ, ರಾಜಶೇಖರ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬೇಕಾಗಿದ್ದಾರೆ

ಎ.ಕೆ. ಫಾರ್ಮದಲ್ಲಿ ಸೇಲ್ಸ್ ಬಾಯ್ಸ್, ಸ್ಟಾಕ್ ತೆಗೆಯಲು PUC/Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.


SALES MANAGER (5 to 10 years experience in Pharma/FMCG company)

ಯಾವುದೇ ಪದವಿ ಹಾಗೂ ಸೂಕ್ತ ಅನುಭವ ಇರುವವರಿಗೆ ಆದ್ಯತೆ. ಆಯ್ಕೆ ಆದ ಅಭ್ಯರ್ಥಿಗಳಿಗೆ ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೊರೇಟ್ ತರಬೇತಿ ಇರುತ್ತದೆ.

ಸ್ಥಳ : ಎ.ಕೆ. ಫಾರ್ಮ, ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.

ಶ್ರೀ ಅನ್ನಪೂರ್ಣೇಶ್ವರಿ ಹೋಟೆಲ್

KSRTC ಬಸ್‌ನಿಲ್ದಾಣ, ದಾವಣಗೆರೆ.



ನಾಲ್ಕು ಸಾವಿರ ಚದುರಡಿಯ ವಿಶಾಲವಾದ ಜಾಗದಲ್ಲಿ ಸುಸಜ್ಜಿತವಾದ ಹೋಟೆಲ್‌ನಲ್ಲಿ ರಾತ್ರಿ ವೇಳೆ ರುಚಿಕರವಾದ ಬೆಣ್ಣೆದೋಸೆ ಸೇರಿದಂತೆ ವಿವಿಧ ಬಗೆಯ ದೋಸೆಗಳು ದೊರೆಯುತ್ತವೆ.

ಶುಚಿ-ರುಚಿಯಾದ ತಿಂಡಿಗಳು, ಊಟವನ್ನು ಸವಿಯಲು ಭೇಟಿ ನೀಡಿ.




# ಧರ್ಮದ ಉದ್ದೇಶ ಸಕಲ ಜೀವಾತ್ಮರಿಗೆ ಒಳಿತು ಬಯಸುವುದು

## ಸಾಣೇಹಳ್ಳಿ ಶ್ರೀಗಳ ಹಿತನುಡಿ

ಸಾಣೇಹಳ್ಳಿ, ಆ.30- ಧರ್ಮದ ಮೂಲ ಉದ್ದೇಶ ಸಕಲ ಜೀವಾತ್ಮರಿಗೆ ಒಳಿತನ್ನು ಬಯಸುವುದು. ಹಾಗೆ ಬಯಸದಿದ್ದರೆ ಅದು ಧರ್ಮವೇ ಅಲ್ಲ ಎನ್ನುವುದು ಶರಣರ ಸಿದ್ಧಾಂತವಾಗಿತ್ತು ಎಂದು ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ನುಡಿದರು.

ಶ್ರೀ ತರಳಬಾಳು ಜಗದ್ಗುರು ಶಾಖಾ ಸಾಣೇಹಳ್ಳಿ ಶ್ರೀಮಠದಿಂದ ಆಯೋಜನೆಗೊಂಡಿರುವ 'ಮತ್ತೆ ಕಲ್ಯಾಣ ಅಂತರ್ಜಾಲ ಉಪನ್ಯಾಸ ಮಾಲಿಕೆ' ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಅತಿಯಾದ ಬಳಕೆಯಿಂದಾಗಿ 'ಧರ್ಮ' ಎನ್ನುವುದು ಈಗ ಕ್ಲೀಷೆಯಾಗಿ ಅಲರ್ಜಿ ಆದಂತಾಗಿದೆ. ಧರ್ಮದ ಕರ್ಮಾಚರಣೆಗಳು ಪ್ರಧಾನವಾಗಿ ತತ್ವ - ಸಿದ್ಧಾಂತಗಳು ಹಿಂದೆ ಸರಿಯುತ್ತಿರುವುದು ವಿಷಾದನೀಯ ಎಂದರು.

ಧರ್ಮ ಎನ್ನುತ್ತಲೇ ಅದಕ್ಕೊಬ್ಬ ಧರ್ಮ ಗುರು, ಧರ್ಮ ಗ್ರಂಥ, ಧರ್ಮ ಕ್ಷೇತ್ರ ಇರಬೇಕು ಎನ್ನುವುದು ಅಲಿಖಿತ ನಿಯಮವಾಗಿಬಿಟ್ಟಿದೆ. ಆದರೆ, ಇದಕ್ಕೆ ಅಪವಾದ ಬಸವಾದಿ ಶಿವಶರಣರಿಂದ ಅಸ್ತಿತ್ವಕ್ಕೆ ಬಂದ 'ಲಿಂಗಾಯತ' ಧರ್ಮ. ಶರಣರ ಉದ್ದೇಶ ಹೊಸ ಧರ್ಮವನ್ನು ಹುಟ್ಟುಹಾಕುವುದಾಗಿರಲಿಲ್ಲ. ಬದಲಾಗಿ ಆಗ ಇದ್ದ ಧರ್ಮಗಳ ಹುಳುಕುಗಳನ್ನು ಅನಾವರಣಗೊಳಿಸಿ, ಅವುಗಳನ್ನು ಇನ್ನಷ್ಟು ಶುದ್ಧ ಮಾಡುವ ಉದ್ದೇಶವಿತ್ತು. ಹಾಗಾಗಿ ಅವರು ಮೊದಲಿಗೆ ಧರ್ಮದಿಂದ ಜಾತಿಯನ್ನು ತೊಲಗಿಸುವ ಪ್ರಯತ್ನ ಮಾಡಿದರು ಎಂದರು.

ಯಾರು ಬೇಕಾದರೂ ತಮ್ಮ ದೇವರನ್ನು ತಾವೇ ಮುಟ್ಟಿ ಪೂಜೆ ಮಾಡಬಹುದೆಂಬ ವಿಶ್ವಾಸ ಧರ್ಮಾಸಕ್ತರಲ್ಲಿ ಬಂತು. ದೇವರನ್ನು ಎಲ್ಲೋ ಹುಡುಕಿಕೊಂಡು ಹೋಗಬೇಕಾಗಿಲ್ಲ, ಸಂಸ್ಕಾರದ ಮೂಲಕ ನಾವೇ ದೇವರಾಗಬಹುದು ಎನ್ನುವ ನಂಬಿಕೆ ಬಲಗೊಂಡಿತು. ಇದನ್ನೇ ಶರಣರು 'ಲಿಂಗಾಯತ' ಧರ್ಮ ಎಂದು ಕರೆದರು.



'ಲಿಂಗಾಯತ' ಒಂದು ಜಾತಿಯಲ್ಲ. ಆಸಕ್ತಿ, ಸಾಧನೆ, ಅನುಭವ, ಅನುಭಾವದಿಂದ ಯಾರು ಬೇಕಾದರೂ 'ಲಿಂಗಾಯತ' ರಾಗಬಹುದು. 'ಲಿಂಗಾಯತ'ರಾಗುವುದು ಎಂದರೆ ಜಾತಿಯ ಕರಾಳ ಸುಳಿಯಿಂದ ಹೊರಬಂದು ವಿಶ್ವಮಾನವರಾಗುವುದು. ಲಿಂಗ ಜಾತಿಯ ಸಂಕೇತವಲ್ಲ. ಕಾಯಕ, ದಾಸೋಹ ಈ ಧರ್ಮದ ತಳಹದಿ. ಇಂದು ಈ ಧರ್ಮ ಮೂಲಸ್ವರೂಪದಲ್ಲಿ ಉಳಿದಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

ಲಿಂಗಾಯತ ಧರ್ಮ ಕುರಿತಂತೆ ಲಿಂಗಾಯತ ಸ್ವತಂತ್ರ ಧರ್ಮದ ಹೋರಾಟಗಾರ, ನಿವೃತ್ತ ಐಎಎಸ್ ಅಧಿಕಾರಿ ಬೆಂಗಳೂರಿನ ಎಸ್.ಎಂ. ಜಾಮದಾರ್ ಮಾತನಾಡಿ, ದೇವರ ಅಸ್ತಿತ್ವದ ಬಗ್ಗೆ ಜಗತ್ತಿನಲ್ಲಿ ಮೂರು ಅಭಿಪ್ರಾಯಗಳಿವೆ. ಒಂದು; ದೇವರು ಇದ್ದಾನೆ, ನಾನು ದೇವರನ್ನು ನಂಬುತ್ತೇನೆ. ಎರಡು; ದೇವರು ಇಲ್ಲ, ನಾನು ನಂಬುವುದಿಲ್ಲ. ಮೂರು; ದೇವರು ಇದ್ದಾನೋ, ಇಲ್ಲವೋ ಗೊತ್ತಿಲ್ಲ. ಅಮೇರಿಕಾದ ಪಿ. ಯು ರಿಸರ್ಚ್ ಸೆಂಟರ್‌ನವರು ಎಂಬತ್ತು ದೇಶಗಳಲ್ಲಿ ಸರ್ವೇ ಮಾಡಿದ ಪ್ರಕಾರ ನೂರಕ್ಕೆ ಎಪ್ಪತ್ತು ಜನ ದೇವರು ಇದ್ದಾನೆ ಎಂದೇ ಹೇಳಿದ್ದಾರೆ. ಐದರಿಂದ ಹತ್ತು ಪ್ರತಿಶತ ಜನ ದೇವರು ಇಲ್ಲ, ನಾನು ದೇವರನ್ನು ನಂಬೋದಿಲ್ಲ ಎಂದು ಹೇಳಿದರೆ, ಇನ್ನು ಉಳಿದವರು ದೇವರ ಬಗೆಗೆ ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ.

ಲಿಂಗಾಯತರ ದೇವರು ನಿರಾಕಾರವಾದ್ದರಿಂದ ಅಲ್ಲಿ ಮೂರ್ತಿ ಪೂಜೆಗೆ, ಪೂಜಾರಿಗೆ, ದೇವಾಲಯಗಳಿಗೆ ಅವಕಾಶವಿಲ್ಲ. ನಿಜವಾಗಿಯೂ ಲಿಂಗಾಯತರಾದಂತವರು ಈ ರೀತಿಯ ಆಚರಣೆಯನ್ನು ಅನುಸರಿಸಬಾರದು ಎಂದು ಹೇಳಿದರು.

ಬೆಂಗಳೂರಿನ ಡಿ. ಪ್ರಸನ್ನ ಕುಮಾರ್ ಸ್ವಾಗತಿಸಿದರು. ಕಡೂರು ತಾಲ್ಲೂಕು ಯಳ್ಳಂಬೆಳಸೆಯ ಡಾ. ವೈ.ಸಿ. ವಿಶ್ವನಾಥ್, ಸುವರ್ಣ ಸ್ಮರಣಾರ್ಥ ಅವರ ಕುಟುಂಬದವರು, ಹೊಳಲ್ಕೆರೆ ತಾಲ್ಲೂಕು ಮುತ್ತುಗದೂರಿನ ಆರ್. ನಾಗರಾಜಪ್ಪ ಮತ್ತು ಕುಟುಂಬ, ಹೊಳಲ್ಕೆರೆ ತಾಲ್ಲೂಕು ತುಪ್ಪದಹಳ್ಳಿ ಯ ಜಿ. ಪರಮೇಶ್ವರಪ್ಪ ಮತ್ತು ಕುಟುಂಬದವರು ಕಾರ್ಯಕ್ರಮದ ದಾಸೋಹಿಗಳಾಗಿದ್ದರು.

# ಎಸ್ಸೆಸ್ಸೆಲ್ಸಿ : ಬಿ. ದರ್ಶನ್‌ಗೆ ಶೇ. 93 ಅಂಕ



ಹರಿಹರ, ಆ.30- ತಾಲ್ಲೂಕಿನ ದೇವರಬೆಳಕೆರೆಯ ಮೊರಾರ್ಜಿ ದೇಸಾಯಿ ವಸತಿಯುತ ಶಾಲೆಯ ವಿದ್ಯಾರ್ಥಿ ಬಿ. ದರ್ಶನ್ (ಕೆ.ಜೆ.ಬೀರೇಶ್, ನಾಗರತ್ನ ದಂಪತಿ ಪುತ್ರ) ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 581/625 (92.9) ಅಂಕ ಗಳಿಸಿದ್ದಾನೆ.



**ಸ್ಪ್ರೇ ಗನ್ ಪೈಪ್**

ದಾವಣಗೆರೆ ನಗರದ ಪ್ರಮುಖ ರಸ್ತೆಗಳಲ್ಲಿ ವಾಹನಗಳನ್ನು ಸ್ವಚ್ಛಗೊಳಿಸುವ ಸ್ಪ್ರೇ ಗನ್ ಪೈಪ್ ಗಳ ಮಾರಾಟ ನಡೆಯುತ್ತಿದೆ. ಸಾಮಾನ್ಯವಾಗಿ ದಸರಾ ಹಾಗೂ ದೀಪಾವಳಿ ಹಬ್ಬದ ವೇಳೆ ಈ ಪೈಪ್‌ಗಳಿಗೆ ಬೇಡಿಗೆ ಹೆಚ್ಚಾಗಿರುತ್ತದೆ. ಆದರೆ ಈ ವರ್ಷ ಕೊರೊನಾ ಹಿನ್ನೆಲೆಯಲ್ಲಿ ಮಾರಾಟ ಕುಸಿತ ಕಂಡಿದೆ ಎನ್ನುತ್ತಾರೆ ವ್ಯಾಪಾರಸ್ಥರು.

# ಭ್ರಷ್ಟ, ಅದಕ್ಷ ಅಧಿಕಾರಿಗಳಿಗೆ ಅವಧಿಗೆ ಮುಂಚೆ ನಿವೃತ್ತಿ

ನವದೆಹಲಿ, ಆ. 30 – ಭ್ರಷ್ಟ ಹಾಗೂ ಅದಕ್ಷ ಅಧಿಕಾರಿಗಳನ್ನು ಗುರುತಿಸಲು ಮುಂದಾಗಿರುವ ಕೇಂದ್ರ ಸರ್ಕಾರ, 30 ವರ್ಷ ಅಧಿಕಾರ ಪೂರೈಸಿರುವವರಲ್ಲಿ ಇಂಥವರನ್ನು ಗುರುತಿಸಿ ಅವಧಿಗೆ ಮುಂಚೆ ನಿವೃತ್ತಿ ನೀಡಲು ನಿರ್ಧರಿಸಿದೆ.

ಈ ಬಗ್ಗೆ ಸಿಬ್ಬಂದಿ ಇಲಾಖೆ ಆದೇಶ ಹೊರಡಿಸಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವಾದಲ್ಲಿ ಅವಧಿಗೆ ಮುಂಚೆ ನಿವೃತ್ತಿ ನೀಡಬೇಕೆಂದು ಎಲ್ಲಾ ಇಲಾಖೆಗಳಿಗೆ ತಿಳಿಸಿದೆ.ಅವಧಿಗೆ ಮುಂಚೆ ನಿವೃತ್ತಿಗೊಳಿಸುವುದು ದಂಡವಲ್ಲ. ಇದು ಕಡ್ಡಾಯ ನಿವೃತ್ತಿಗಿಂತ ಭಿನ್ನವಾಗಿದೆ ಎಂದೂ ಸ್ಪಷ್ಟನೆ ನೀಡಲಾಗಿದೆ.

50 ರಿಂದ 55 ವರ್ಷ ವಯಸ್ಸಿನ ಇಲ್ಲವೇ 30 ವರ್ಷ ಸೇವೆ ಪೂರ್ಣಗೊಳಿಸಿದ ಸರ್ಕಾರಿ ನೌಕರರನ್ನು ಯಾವುದೇ ಸಮಯದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಅವಧಿಗೆ ಮುಂಚೆ ನಿವೃತ್ತಿಗೊಳಿಸಲು ಅವಕಾಶವಿದೆ ಎಂದು ಸಿಬ್ಬಂದಿ ಇಲಾಖೆ ಹೇಳಿದೆ.

# ಬೆಳೆ ನಷ್ಟ : ಹರಪನಹಳ್ಳಿಯಲ್ಲಿ ಪ್ರತಿಭಟನೆ



ಚುಕ್ಕೆ ರೋಗ ಮತ್ತು ಕೊಳೆ ರೋಗದಿಂದ ನಷ್ಟ ಹೊಂದಿದ ಈರುಳ್ಳಿ ಬೆಳೆಗಾರರಿಗೆ ಸರ್ಕಾರ ಈ ಕೂಡಲೇ ಪರಿಹಾರ ನೀಡಬೇಕು ಎಂದು ಒತ್ತಾಯಿಸಿ, ಇಂದು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಎಂ.ಪಿ. ಪ್ರಕಾಶ್ ಸಮಾಜ ಮುಖಿ ಟ್ರಸ್ಟ್ ಅಧ್ಯಕ್ಷೆ ಎಂ.ಪಿ. ವೀಣಾ ಮಹಾಂತೇಶ ಚರಂತಿ ಮಠ್ ಹೇಳಿದರು.

# ಬಂಜಾರ ಸಮುದಾಯ ಅಭಿವೃದ್ಧಿಗೆ ಸಿಎಂರಿಂದ ಹಲವಾರು ಯೋಜನೆ



**ರಾಣೇಬೆನ್ನೂರು**

ರಾಣೇಬೆನ್ನೂರು, ಆ.30- ಮುಖ್ಯಮಂತ್ರಿ ಯಡಿಯೂರಪ್ಪ ರಾಜ್ಯದಲ್ಲಿ ಬಂಜಾರ ಸಮುದಾಯದ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿದ್ದಾರೆ ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ತಾಲ್ಲೂಕಿನ ಚಿಕ್ಕಅರಳಹಳ್ಳಿ ಗ್ರಾಮದಲ್ಲಿ ಭಾನುವಾರ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ವತಿಯಿಂದ 5 ಲಕ್ಷ ರೂ.ಗಳ ವೆಚ್ಚದಲ್ಲಿ ಸಿಸಿ ರಸ್ತೆ ಮತ್ತು ಸಿಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ನಗರದಂತೆ ಗ್ರಾಮೀಣ ಭಾಗಗಳಲ್ಲಿ ಉತ್ತಮ ರಸ್ತೆ, ಚರಂಡಿಗಳ ನಿರ್ಮಾಣ ತುಂಬಾ ಅಗತ್ಯವಿದೆ. ಸಾರ್ವಜನಿಕರು ಗುತ್ತಿಗೆ ದಾರರಿಗೆ ಸಹಕರಿಸಿ ನಿಗದಿತ ಸಮಯದಲ್ಲಿ ಕಾಮಗಾರಿ ಪೂರ್ಣಗೊಳ್ಳುವಂತೆ ನೋಡಿಕೊಳ್ಳಬೇಕು ಎಂದರು. ಮೆಡ್ಲೇರಿ, ನೂಕಾಪುರ, ಚನ್ನಾಪುರ, ಹುಲ್ಲತ್ತಿ, ಗುಡಗೂರ ತಾಂಡಾಗಳು ಹಾಗೂ ಗೋವಿಂದ ಬಡಾವಣೆ ಸೇರಿದಂತೆ ಒಟ್ಟು 50 ಲಕ್ಷದ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

ಮಾಲತೇಶ ಜಾಧವ್, ರಮೇಶ ನಾಯ್ಕ್, ಪುಟ್ಟಪ್ಪ ಲಮಾಣಿ, ಈರಪ್ಪ ಬಜ್ಜಿ, ಮಂಜಣ್ಣ ವಡ್ಡರ, ಗುತ್ತಿಗೆದಾರ ಸಂತೋಷ ಮುಡದೇವಣ್ಣನವರ, ಸಹಾಯಕ ಇಂಜಿನಿಯರ್ ವಿಕಾಸ್ ಮತ್ತಿತರರಿದ್ದರು.

# ಎಸ್ಸೆಸ್ ನಿವಾಸಕ್ಕೆ ಚಾಲೆಂಜಿಂಗ್ ಸ್ಟಾರ್ ದರ್ಶನ್ ಭೇಟಿ



ದಾವಣಗೆರೆ, ಆ.30- ಚಾಲೆಂಜಿಂಗ್ ಸ್ಟಾರ್ ದರ್ಶನ್ ಗೋವು ಸಾಕಣೆ ಹಾಗೂ ಕುದುರೆ ಸಾಕಣೆ ಕುರಿತು ಮಾಹಿತಿ ಪಡೆಯಲು ಶಾಸಕ ಮತ್ತು ಮಾಜಿ ಸಚಿವ ಶಾಮನೂರು ಶಿವಶಂಕರಪ್ಪ ಅವರ ಫಾರ್ಮ್ ಹೌಸ್‌ಗೆ ಇಂದು ಭೇಟಿ ನೀಡಿದ್ದರು.

ಮಧ್ಯಾಹ್ನದಿಂದ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ದುಗ್ಗಾವತಿಯಲ್ಲಿನ ಶಾಮನೂರು ಅವರ ತೋಟಕ್ಕೆ ಭೇಟಿ ನೀಡಿದ್ದಾರೆ. ಅಲ್ಲಿನ ಗೋ ಪಾಲನೆ ಬಗ್ಗೆ ಮಾಹಿತಿ ಸಂಗ್ರಹಿಸಿದ್ದಾರೆ. ನಂತರ ದಾವಣಗೆರೆ ನಗರದ ಕಲ್ಲೇಶ್ವರ ರೈಸ್ ಮಿಲ್ ಬಳಿ ಕುದುರೆಗಳ ಪಾಲನೆ ಬಗ್ಗೆ ಮಾಹಿತಿ ಪಡೆದಿದ್ದಾರೆ. ಈ ವೇಳೆ ನಟ ದರ್ಶನ್‌ಗೆ ಶಾಸಕ ಶಾಮನೂರು ಶಿವಶಂಕರಪ್ಪ, ಪುತ್ರ - ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ ಸಾಥ್ ನೀಡಿದ್ದರು.

ಸಂಜೆವರೆಗೆ ವಿವಿಧ ಫಾರ್ಮ್ ಹೌಸ್‌ಗೆ ದರ್ಶನ್ ಭೇಟಿ ನೀಡಿದ್ದು, ಮಾಹಿತಿ ಸಂಗ್ರಹಿಸಿದ್ದಾರೆ. ನಂತರ ರಾತ್ರಿ ಎಸ್ಸೆಸ್ ಮನೆಯಲ್ಲಿಯೇ ಊಟ ಮಾಡಿದ್ದಾರೆ. ಇಂದು ನಗರದಲ್ಲಿಯೇ ವಾಸ್ತವ್ಯ ಹೂಡಿದ್ದು, ಬಾಪೂಜಿ ಗೆಸ್ಟ್ ಹೌಸ್‌ನಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ.

ಬೆಳಗ್ಗೆ ಮತ್ತೆ ಕೆಲ ಪ್ರಗತಿಪರ ರೈತರನ್ನು ದರ್ಶನ್ ಅವರು ಭೇಟಿ ಮಾಡಲಿದ್ದು, ವಿವಿಧ ವಿಚಾರಗಳ ಕುರಿತು ಚರ್ಚಿಸಲಿದ್ದಾರೆ. ಈ ವೇಳೆ ಅಭಿಮಾನಿಗಳು ನಟ ದರ್ಶನ್ ಅವರನ್ನು ನೋಡಲು ಮುಗಿಬಿದ್ದಿದ್ದರು.

ಕಾರ್ಯನಿಮಿತ್ತ ನಗರಕ್ಕೆ ಆಗಮಿಸಿದ್ದ ನಟ ದರ್ಶನ್ ಅವರನ್ನು ಇಲ್ಲಿನ ಬಾಪೂಜಿ ಅತಿಥಿ ಗೃಹದಲ್ಲಿ ಪಾಲಿಕೆಯ ವಿರೋಧ ಪಕ್ಷದ ನಾಯಕ ಎ.ನಾಗರಾಜ್, ಪಾಲಿಕೆ ಸದಸ್ಯರಾದ ದೇವರಮನೆ ಶಿವಕುಮಾರ್, ಮಂಜುನಾಥ್ ಗಡಿಗುಡಾಳ್, ಕಾಂಗ್ರೆಸ್ ನಾಯಕರಾದ ದಿನೇಶ್ ಕೆ.ಶೆಟ್ಟಿ, ಮುದೇಗೌಡ್ರ ಗಿರೀಶ್ ಹಾಗೂ ಮತ್ತಿತರರು ಭೇಟಿ ಮಾಡಿದರು.

# ರುಪೇ ಕಾರ್ಡ್, ಭೀಮ್ ಯುಪಿಐ ವಹಿವಾಟು ಶುಲ್ಕ ವಾಪಸ್ ನೀಡಲು ಬ್ಯಾಂಕುಗಳಿಗೆ ಐ.ಟಿ. ಸೂಚನೆ

ನವದೆಹಲಿ, ಆ. 30 – ಜನವರಿ 1, 2020ರ ನಂತರ ರುಪೇ ಕಾರ್ಡ್ ಇಲ್ಲವೇ ಭೀಮ್ - ಯುಪಿಐ ರೀತಿಯ ಎಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ನಡೆಸಲಾದ ವಹಿವಾಟಿಗೆ ವಿಧಿಸಲಾದ ಶುಲ್ಕವನ್ನು ಗ್ರಾಹಕರಿಗೆ ಮರಳಿಸುವಂತೆ ಆದಾಯ ತೆರಿಗೆ ಇಲಾಖೆ ಬ್ಯಾಂಕುಗಳಿಗೆ ತಿಳಿಸಿದೆ.

ಬ್ಯಾಂಕುಗಳು ಇನ್ನು ಮುಂದೆ ಈ ರೀತಿಯ ವಹಿವಾಟಿಗೆ ಶುಲ್ಕ ವಿಧಿಸಬಾರದು. 2019ರ ಹಣಕಾಸು ಕಾಯ್ದೆಯ ಸೆಕ್ಷನ್ 269 ಎಸ್.ಯು. ಅಡಿಯಲ್ಲಿ ಸರ್ಕಾರ ನಗದು ರಹಿತ ಆರ್ಥಿಕತೆಗೆ ಉತ್ತೇಜನ ನೀಡುತ್ತಿದೆ. ಬ್ಯಾಂಕುಗಳು ಈ ವಹಿವಾಟಿಗೆ ವಿಧಿಸಿದ ಶುಲ್ಕ ವಾಪಸ್ ನೀಡಬೇಕು ಎಂದು ತಿಳಿಸಲಾಗಿದೆ.

# ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರಾಗಿ ಆರ್.ಎಲ್. ಶಿವಪ್ರಕಾಶ್



ದಾವಣಗೆರೆ, ಆ.30- ಜಿಲ್ಲಾ ಬಿಜೆಪಿ ಯುವ ಮೋರ್ಚಾ ಜಿಲ್ಲಾ ಅಧ್ಯಕ್ಷರನ್ನಾಗಿ ಆರ್.ಎಲ್.ಶಿವಪ್ರಕಾಶ್ ಅವರನ್ನು ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಎಂ.ವೀರೇಶ್ ಅವರ ಆದೇಶದ ಮೇರೆಗೆ ನೇಮಿಸಲಾಗಿದೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್.ಜಗದೀಶ್ ತಿಳಿಸಿದ್ದಾರೆ. ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷರಾದ ಮಂಜುಳಾ ಮಹೇಶ್, ಬಿಜೆಪಿ ಮುಖಂಡ ಬಾತಿ ವೀರೇಶ್ ಮತ್ತಿತರರು ಉಪಸ್ಥಿತರಿದ್ದರು.

# ಪರಮೇಶ್ವರಪ್ಪ ಕಾಲೇಜು ಸಮಿತಿ ಸದಸ್ಯ



ದಾವಣಗೆರೆ,ಆ.30- ನಗರದ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಅಭಿವೃದ್ಧಿ ಸಮಿತಿಯ ಸದಸ್ಯರಾಗಿ ಎಸ್. ಪರಮೇಶ್ವರಪ್ಪ ಬಣಕಾರ್ ಅವರು ನೇಮಕಗೊಂಡಿದ್ದಾರೆ. ಶಾಸಕರೂ ಆದ ಸಮಿತಿ ಅಧ್ಯಕ್ಷ ಎಸ್.ಎ. ರವೀಂದ್ರನಾಥ್ ಅವರು ಈ ನೇಮಕ ಮಾಡಿದ್ದಾರೆ.

# ಕೊರೊನಾ : ಗಾಯಕಿ ಲತಾ ಮಂಗೇಶ್ಕರ್ ಕಟ್ಟಡ ಸೀಲ್‌ಡೌನ್



ಮುಂಬೈ, ಆ. 30 – ಕೊರೊನಾ ಹಿನ್ನೆಲೆಯಲ್ಲಿ ಮುಂಬೈ ನಗರ ಪಾಲಿಕೆಯು ಪ್ರಸಿದ್ಧ ಗಾಯಕಿ ಲತಾ ಮಂಗೇಶ್ಕರ್ ಅವರ ಕಟ್ಟಡವನ್ನು ಸೀಲ್‌ಡೌನ್ ಮಾಡಿದೆ.

90 ವರ್ಷದ ಗಾಯಕಿ ಮಂಗೇಶ್ಕರ್ ಅವರು ದಕ್ಷಿಣ ಮುಂಬೈನ ಪೆದ್ದರ್ ರಸ್ತೆ ಕಟ್ಟಡದಲ್ಲಿದ್ದಾರೆ. ಈ ಕಟ್ಟಡದಲ್ಲಿ ಹಲವಾರು ಹಿರಿಯ ನಾಗರಿಕರಿದ್ದಾರೆ.

ಗಾಯಕಿ ಇರುವ ಪ್ರಭಾಕುಂಜ್ ಮನೆಯನ್ನು ಸೀಲ್‌ಡೌನ್ ಮಾಡಲಾಗಿರುವ ಬಗ್ಗೆ ಹಲವಾರು ಕರೆಗಳು ಬರುತ್ತಿವೆ. ಕೊರೊನಾ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಕಟ್ಟಡದಲ್ಲಿ ಹಲವಾರು ಹಿರಿಯ ನಾಗರಿಕರು ನೆಲೆಸಿದ್ದು, ಮುನ್ನೆಚ್ಚರಿಕೆ ತೆಗೆದುಕೊಳ್ಳುವುದು ಅಗತ್ಯವಾಗಿದೆ ಎಂದು ಗಾಯಕಿಯ ಕುಟುಂಬದವರು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಕಟ್ಟಡದ ಹಲವಾರು ನಿವಾಸಿಗಳಿಗೆ ಕೊರೊನಾ ಬಂದಿದೆ ಎಂಬ ಸುದ್ದಿಗಳಿದ್ದವು. ಆದರೆ, ಹಿತೈಷಿಗಳು ಗಾಳಿ ಸುದ್ದಿಗೆ ಕಿವಿಗೊಡಬಾರದು ಎಂದು ಗಾಯಕಿಯ ಕುಟುಂಬದವರು ಮನವಿ ಮಾಡಿಕೊಂಡಿದ್ದಾರೆ.

# ಆಲಸ್ಯ - ನೋವು ಮರೆಯಲು ಕ್ರೀಡೆ ಸಹಕಾರಿ

## ವಾರ್ತಾ ಇಲಾಖೆಯ ಬಿ.ಎಸ್ ಬಸವರಾಜ್



ದಾವಣಗೆರೆ,ಆ.30- ಅಯೋಧ್ಯೆಯಲ್ಲಿ ಶ್ರೀ ರಾಮಮಂದಿರ ನಿರ್ಮಾಣವಾಗಿರುವ ಹಿನ್ನೆಲೆಯಲ್ಲಿ ಅದರ ಸಂಭ್ರಮಾಚರಣೆಯ ಪ್ರಯುಕ್ತ ಸಂಡೆ ಕ್ರಿಕೆಟರ್ ಫ್ರೆಂಡ್ಸ್ ಗ್ರೂಪ್ ವತಿಯಿಂದ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿತ್ತು.

ನಗರದ ಐ.ಟಿ.ಐ ಕಾಲೇಜು ಚೌಡೇಶ್ವರಿ ದೇವಾಲಯದ ಆವರಣದಲ್ಲಿ ಏರ್ಪಡಿಸಲಾಗಿದ್ದ ಈ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ವಾರ್ತಾ ಇಲಾಖೆಯ ಬಿ.ಎಸ್ ಬಸವರಾಜ್ ಅವರು, ಕ್ರೀಡೆಯಿಂದ ಮಾನವನಲ್ಲಿ ಹೊಸ ಚೈತನ್ಯ ಉಂಟಾಗುತ್ತದೆ. ತಮ್ಮ ಎಲ್ಲಾ ಆಲಸ್ಯ ನೋವುಗಳನ್ನು ಮರೆಯಲು ಈ ಆಟಗಳು ಸಹಕಾರಿಯಾಗಿವೆ ಎಂದರು.

ಯುವಕರು ದುಷ್ಚಟಗಳಿಂದ ದೂರವಿರಬೇಕು. ವ್ಯಸನದಿಂದ ದೇಹದ ಬಲ ಕಡಿಮೆಯಾಗುತ್ತದೆ. ಇದರಿಂದ ಕ್ರೀಡೆಯಲ್ಲಿ ಗೆಲುವು ಸಾಧಿಸಲು ಸಾಧ್ಯವಾಗುವುದಿಲ್ಲ. ನಿರಂತರ ಕ್ರೀಡಾ ಅಭ್ಯಾಸವಿರಲಿ ಎಂದು ಕರೆ ನೀಡಿದರು.

ಕ್ರಿಕೆಟ್ ಪಂದ್ಯಾವಳಿಯಲ್ಲಿ ಒಟ್ಟು 11 ತಂಡಗಳು ಭಾಗವಹಿಸಿದ್ದವು. ತದನಂತರ ಪಂದ್ಯಾವಳಿಯಲ್ಲಿ ಪ್ರಥಮ ಬಹುಮಾನ ಭಗತ್‌ಸಿಂಗ್ ನಗರದ ಜಗದೀಶ್ ತಂಡ 10,000 ರೂ. ಆಕರ್ಷಕ ಟ್ರೋಫಿ ಪಡೆದುಕೊಂಡಿತು. ದ್ವಿತೀಯ ಬಹುಮಾನ 5,000 ರೂ. ಪ್ರಸಾದ ತಂಡ ಪಡೆದುಕೊಂಡಿತು. ತೃತೀಯ ಬಹುಮಾನ ಮುರುಗನ್ ತಂಡ ಪಡೆದುಕೊಂಡಿತು.

ಉತ್ತಮ ಬ್ಯಾಟ್ಸ್‌ಮನ್ ಆಟೋ ರವಿಕುಮಾರ್, ಉತ್ತಮ ಬೌಲರ್ ಸಿದ್ದು ಹುಬ್ಬಿ, ಸರಣಿ ಶ್ರೇಷ್ಠ ಮಂಜುನಾಥ್ ಪ್ರಶಸ್ತಿ ಪಡೆದುಕೊಂಡರು.

ಈ ಸಂದರ್ಭದಲ್ಲಿ ಈ ಸಂಘದ ಅಧ್ಯಕ್ಷ ಮುರುಗನ್, ಕಾರ್ಯದರ್ಶಿ ಪ್ರಸಾದ್, ಸದಸ್ಯರಾದ ಶ್ರೀನಿವಾಸ್ ಬೀಡಾ, ಆಟೋ ರವಿಕುಮಾರ್, ಶರತ್‌ಕುಮಾರ್, ಕರಿಯಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಪೌರ ಕಾರ್ಮಿಕರಿಗೆ ಪಾದ ಪೂಜೆ ಸಲ್ಲಿಸಿ ಹುಟ್ಟುಹಬ್ಬ ಆಚರಿಸಿಕೊಂಡ ಲೋಕಿಕೆರೆ ನಾಗರಾಜ್



ದಾವಣಗೆರೆ,ಆ.30- ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ್ ಅವರು ತಮ್ಮ ಹುಟ್ಟುಹಬ್ಬವನ್ನು ನಗರ ಸ್ವಚ್ಛತೆಯಲ್ಲಿ ಅತ್ಯಮೂಲ್ಯ ಸೇವೆ ಸಲ್ಲಿಸುತ್ತಿರುವ ಪೌರ ಕಾರ್ಮಿಕರಿಗೆ ಪಾದ ಪೂಜೆ ಸಲ್ಲಿಸುವುದರ ಮೂಲಕ ಆಚರಿಸಿಕೊಂಡರು.

ಲೋಕಿಕೆರೆ ನಾಗರಾಜ್ ಮತ್ತು ಶ್ರೀಮತಿ ಲತಾ ದಂಪತಿ ಹಾಗೂ ಕುಟುಂಬ ವರ್ಗದವರು ತಮ್ಮ ನಿವಾಸದಲ್ಲಿ ಪೌರ ಕಾರ್ಮಿಕರನ್ನು ಪೂಜಿಸುವುದರೊಂದಿಗೆ ಅಭಿನಂದಿಸಿದರು. ನಾಗರಾಜ್ ಅವರ ತಂದೆ ಹನುಮಂತಪ್ಪ ಕರೇಗೌಡ್ರ, ಬಾಡಾದ ಆನಂದರಾಜ್ ಮತ್ತಿತರರು ಉಪಸ್ಥಿತರಿದ್ದರು.

## ಪ್ರಿಯದರ್ಶಿನಿ ಎಸ್. ಜೈನ್ ನಿಧನ



ದಾವಣಗೆರೆ ಪಿ.ಜೆ. ಬಡಾವಣೆ, 7ನೇ ಮುಖ್ಯ ರಸ್ತೆ ವಾಸಿ, ಬಂಗಾರದ ವರ್ತಕ ಶ್ರೇಣಿಕ್ ಎ. ಜೈನ್ ಅವರ ಧರ್ಮಪತ್ನಿ **ಶ್ರೀಮತಿ ಪ್ರಿಯದರ್ಶಿನಿ ಎಸ್. ಜೈನ್** ಅವರು ದಿನಾಂಕ 30.8.2020ರ ಭಾನುವಾರ ಬೆಳಿಗ್ಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 35 ವರ್ಷ ವಯಸ್ಸಾಗಿತ್ತು. ಪತಿ, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 31.08.2020ರ ಸೋಮವಾರ ಬೆಳಿಗ್ಗೆ 8 ಗಂಟೆಗೆ ನಗರದ ಜೈನ್ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

– ದುಃಖತಪ್ತ ಕುಟುಂಬ ವರ್ಗ

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 30.08.2020ರಂದು ನಿಧನರಾದ ಭರತ್ ಏಜೆನ್ಸೀಸ್ ಮಾಲೀಕರೂ, ಅಕ್ಕಿ ವರ್ತಕರೂ, ನಮ್ಮ ಆತ್ಮೀಯರೂ ಆದ

**ಶ್ರೀ ಬಿ.ಪಿ. ಗಣೇಶ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ ವೈ.ಬಿ. ಸತೀಶ್, ಶ್ರೀನಿವಾಸ ಇಂಡಸ್ಟ್ರೀಸ್ ✦ ಎಸ್.ಜಿ. ಉಳವಯ್ಯ, ಶ್ರೀ ಚನ್ನಬಸವೇಶ್ವರ ರೈಸ್‌ಟೆಕ್
✦ ರಾಜು, ರುದ್ರೇಶ್, ರಾಜು ಏಜೆನ್ಸೀಸ್, ಭುವನೇಶ್ವರಿ ಆಗ್ರೋ ಇಂಡಸ್ಟ್ರೀಸ್
✦ ಹೆಚ್.ಎಂ. ನಾಗರಾಜ್, ಶ್ರೀಶೈಲ ಮಲ್ಲಿಕಾರ್ಜುನ ಟ್ರೇಡರ್ಸ್ ✦ ಎನ್.ಜಿ.ಎಸ್. ರಮೇಶ್, ಗುತ್ತಿಗೆದಾರರು
✦ ಬೆಳ್ಳೂಡಿ ಶಿವಕುಮಾರ್, ಶ್ರೀಶೈಲ ಮಲ್ಲಿಕಾರ್ಜುನ ಟ್ರಾನ್ಸ್‌ಪೋರ್ಟ್
✦ ಮಹಾಂತೇಶ್ ಒಣರೊಟ್ಟಿ, ಶ್ರೀ ಬಸವೇಶ್ವರ ಟ್ರಾನ್ಸ್‌ಪೋರ್ಟ್ ✦ ಕೆ. ಬಸವಲಿಂಗಪ್ಪ, ಕ್ಯಾನ್‌ವಾಸಿಂಗ್ ಏಜೆಂಟ್

**JANATHAVANI** - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte